ಮಹಾಂತ ಜೋಳಿಗೆ

ವ್ಯಸನಮುಕ್ತ ಆಂದೋಲನ

ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)

॥ ಓಂ ಶ್ರೀಗುರು ಬಸವಲಿಂಗಾಯ ನಮಃ ॥

ಮಹಾಂತ ಜೋಳಿಗೆ
ವ್ಯಸನಮುಕ್ತ ಆಂದೋಲನ

ಲೇಖಕರು

ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)

ಎಂ.ಎ.(ತತ್ವಜ್ಞಾನ),ಎಲ್ಎಲ್.ಬಿ.(ಸ್ಪೇಶಲ್),

ಎಂ.ಎ.(ಹಿಂದಿ), ಎಂ.ಎ.(ಕನ್ನಡ), ಸಿ.ವಾಯ್.ಇಡಿ.(ಯೋಗ)

ಸಂಚಾಲಕರು, ಮಹಾಂತ ಜೋಳಿಗೆ - ಶರಣಸಿದ್ಧಾಂತ ವಿದ್ಯಾಪೀಠ

ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

೨೦೨೨

ಬಸವ ಕೇಂದ್ರ

ಚಿತ್ತರಗಿ ಶ್ರೀ ವಿಜಯಮಹಾಂತೇಶ್ವರ ಧರ್ಮ ಪ್ರಸಾರಕ ಮಂಡಲ

ಚಿತ್ತರಗಿ ಸಂಸ್ಥಾನಮಠ,

ಇಳಕಲ್ಲ-೫೮೭ ೧೨೫. ಜಿ. ಬಾಗಲಕೋಟ

ಮಹಾಂತ ಜೋಳಿಗೆ – ವ್ಯಸನಮುಕ್ತ ಆಂದೋಲನ

ಲೇಖಕರು : ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)
ಎಂ.ಎ.(ತತ್ವಜ್ಞಾನ),ಎಲ್‌ಎಲ್.ಬಿ.(ಸ್ಪೇಶಲ್),
ಎಂ.ಎ. (ಕನ್ನಡ), ಎಂ.ಎ.(ಹಿಂದಿ),
ಸಿ.ವಾಯ್.ಇಡಿ. (ಯೋಗ ಶಿಕ್ಷಣ)
ಗೌ॥ ಸಂಪಾದಕರು, ಬಸವ ಬೆಳಗು ಪತ್ರಿಕೆ
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

© ಲೇಖಕರ ಸ್ವಾಧೀನ

ಪ್ರಕಾಶಕರು : ಬಸವ ಕೇಂದ್ರ
ಚಿತ್ತರಗಿ ಶ್ರೀ ವಿಜಯಮಹಾಂತೇಶ್ವರ ಧರ್ಮ ಪ್ರಸಾರಕ ಮಂಡಲ
ಚಿತ್ತರಗಿ ಸಂಸ್ಥಾನಮಠ, ಇಳಕಲ್ಲ-೫೮೭ ೧೨೫. ಜಿ. ಬಾಗಲಕೋಟೆ

ಪ್ರಥಮ ಮುದ್ರಣ : ೨೦೨೨

ಪ್ರತಿಗಳು : ೧೦೦೦

ಪುಟಗಳು : ii + ೪೬ = ೪೮

ಪೇಪರ ಬಳಸಿದ್ದು : ಮ್ಯಾಪ್ಲಿಥೋ ಮತ್ತು ಆರ್ಟ ಕಾರ್ಡ ಕವ್ಹರ ೨೫೦ ಜಿ.ಎಸ್.ಎಂ.

ಬೆಲೆ : ₹ ೪೦/- (ನಾಲ್ವವತ್ತು ರೂಪಾಯಿಗಳು)

ಮುಖಪುಟ ವಿನ್ಯಾಸ : ಶ್ರೀ ರವೀಂದ್ರ ವಿಶ್ವಜ್ಞ, ಧಾರವಾಡ.

ಮುದ್ರಕರು : ಶ್ರೀ ಹುಚ್ಚೇಶ್ವರ ಆಫ್‌ಸೆಟ್ ಪ್ರಿಂಟರ್ಸ
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ
ಜಂಗಮವಾಣಿ : ೯೦೩೬೬ ೬೬೬೪೨

ಮಹಾಂತ ಜೋಳಿಗೆ

ವ್ಯಸನ ಮುಕ್ತ ಆಂದೋಲನ

[ಪ್ರತಿ ವರುಷ ಅಗಸ್ಟ ೧, ವ್ಯಸನಮುಕ್ತ ದಿನಾಚರಣೆ]

ಮಹಾಂತಜೋಳಿಗೆಯ ಶಿವಶಿಲ್ಪಿಗಳೂ, ವ್ಯಸನ ಮುಕ್ತ ಆಂದೋಲನದ ಹರಿಕಾರರೂ ಆಗಿದ್ದ ಪರಮಪೂಜ್ಯ ಡಾ. ಮಹಾಂತ ಶಿವಯೋಗಿಗಳು ಚಿತ್ತರಗಿ ಶ್ರೀ ವಿಜಯಮಹಾಂತೇಶ್ವರ ಸಂಸ್ಥಾನ ಮಠ ಇಳಕಲ್ಲ ಜಿ ॥ ಬಾಗಲಕೋಟೆ ಪೂಜ್ಯರ ಜನ್ಮ ದಿನವನ್ನು (೧-೮-೧೯೩೦) ಪ್ರತಿವರುಷ ಅಗಸ್ಟ-೧ ನ್ನು **'ವ್ಯಸನ ಮುಕ್ತ ದಿನ'** ವಾಗಿ ಆಚರಿಸಲು ಕರ್ನಾಟಕ ಸರ್ಕಾರ ನಿರ್ಧರಿಸಿ ಆದೇಶಿಸಿದೆ.

ಪರಮಪೂಜ್ಯ ಡಾ.ಮಹಾಂತ ಸ್ವಾಮಿಗಳು ಅಂದಿನ ವಿಜಯಪುರ ಜಿಲ್ಲೆಯ (ಇಂದಿನ ಬಾಗಲಕೋಟೆ ಜಿಲ್ಲೆ) ಜಮಖಂಡಿ ತಾಲೂಕಿನ ಕೃಷ್ಣಾನದಿಯ ದಡದಲ್ಲಿರುವ ಹಿಪ್ಪರಗಿ ಗ್ರಾಮದ ಪಾಲಭಾವಿ ಹಿರೇಮಠ ಮನೆತನದ ಬಸವಭಕ್ತಿ ಸಂಪನ್ನ ಶರಣದಂಪತಿಗಳಾದ ಶ್ರೀ ವಿರುಪಾಕ್ಷಯ್ಯ ಹಾಗೂ ಶ್ರೀಮತಿ ನೀಲಮ್ಮನವರ ಚಿದ್‌ಗರ್ಭದಲ್ಲಿ ದಿನಾಂಕ:೧-೮-೧೯೩೦ ರಂದು ಜನಿಸಿದರು. ಪೂಜ್ಯರ ಬಾಲ್ಯದ ಹೆಸರು **ಮಹಾಂತಯ್ಯ.**

ಬಾಲಕ ಮಹಾಂತಯ್ಯನಿಗೆ ೫ವರುಷ ತುಂಬಿದಾಗ ಹಿಪ್ಪರಿಗೆಯಲ್ಲಿಯೇ ಸರ್ಕಾರಿ ಕನ್ನಡ ಶಾಲೆಗೆ ಹೆಸರು ಹಚ್ಚಿದರು. ೫ನೆಯ ವರ್ಗದವರಗೆ ಹಿಪ್ಪರಗಿ ಗ್ರಾಮದಲ್ಲಿ ಓದಿದ 'ಮಹಾಂತಯ್ಯ' ೧೦ ವರ್ಷದ ಬಾಲಕನಾಗಿದ್ದಾಗ ಅಥಣಿ ತಾಲೂಕಿನ 'ಸವದಿ' ಗ್ರಾಮದ ವಿರಕ್ತಮಠದ ಪೂಜ್ಯ ಶ್ರೀ ಸಂಗನಬಸವ ಸ್ವಾಮಿಗಳು ಹಿಪ್ಪರಗಿ ಗ್ರಾಮಕ್ಕೆ ಆಗಮಿಸಿ ಮಹಾಂತಯ್ಯನನ್ನು ತಮ್ಮ ಶ್ರೀಮಠದ ಉತ್ತರಾಧಿಕಾರಿಯನ್ನಾಗಿ ಆಯ್ಕೆ ಮಾಡಿಕೊಂಡರು. ಮುಂದೆ ಕೆಲವೇ ದಿನಗಳಲ್ಲಿ ಸವದಿಯ ವಿರಕ್ತಮಠಕ್ಕೆ ಬಂದು, ಮಠದ ಮರಿದೇವರಾದರು. ಸವದಿ ಭಕ್ತರು 'ಮಹಾಂತದೇವ'ರನ್ನು ಮುಧೋಳ ಗವಿಮಠದಲ್ಲಿಯ ಸಂಸ್ಕೃತ ಪಾಠಶಾಲೆಗೆ ಸೇರಿಸಿದರು. ಅಲ್ಲಿ ಮೂರು ವರುಷ ಅಧ್ಯಯನ ಮಾಡಿ, ೧೯೪೪ರಲ್ಲಿ 'ಶಿವಯೋಗ ಮಂದಿರ'ದಲ್ಲಿ ಪ್ರವೇಶ ಪಡೆದು ೧೯೫೨ರವರೆಗೆ ಆರು ವರುಷಗಳ ಕಾಲ ಸಂಸ್ಕೃತ-ಕನ್ನಡ ವಿದ್ಯಾಭ್ಯಾಸ ಮಾಡಿದರು. ಅನಂತರ ಭಕ್ತರ ಅಪೇಕ್ಷೆಯಂತೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಉತ್ತರಪ್ರದೇಶದ **'ಬನಾರಸ'** ಅಂದರೆ **ಕಾಶಿಗೆ** ಹೋದರು. ಅಲ್ಲಿ ಜಂಗಮವಾಡಿ ಮಠದಲ್ಲಿದ್ದು ಕಾಶಿಯ ಕ್ವೀನ್ಸ್ ಕಾಲೇಜಿನಲ್ಲಿ ಸಂಸ್ಕೃತ ಪ್ರಧಾನ ವಿಷಯವಾಗಿ ತೆಗೆದುಕೊಂಡು ಸಂಸ್ಕೃತ-ಹಿಂದಿ-ಯೋಗ ಅಭ್ಯಾಸ ಮಾಡಿದರು. ಕಾಶಿಯಲ್ಲಿಯ 'ಗುಪ್ತಾ ಸಂಗೀತ ವಿದ್ಯಾಲಯ' ದಲ್ಲಿ

ಶ್ರೀ ಗುಪ್ತಾ ಎಂಬ ಸಂಗೀತ ವಿದ್ವಾಂಸರಲ್ಲಿ ಶಾಸ್ತ್ರೀಯ ಸಂಗೀತ ಕಲಿತು ವಿಶೇಷ ಪರಿಣತಿ ಸಾಧಿಸಿದರು. ಇದೇ ಕಾಲಕ್ಕೆ ಕಾಶಿಯಲ್ಲಿದ್ದ 'ಥಿಯಾಸೊಫಿಕಲ್ ಸೊಸೈಟಿ ಆಫ್ ಇಂಡಿಯಾ' (ಬ್ರಹ್ಮಜ್ಞಾನ ಸಮಾಜ) ತತ್ತ್ವಾನ್ವೇಷಣ ಮಂದಿರದಲ್ಲಿ ನಿರಂತರ ಸಂಪರ್ಕದಲ್ಲಿದ್ದು ಭಾರತೀಯ ದಾರ್ಶನಿಕ ಸಿದ್ಧಾಂತ ವೇದಾಂತಗಳನ್ನು ಅರಿತುಕೊಂಡರು.

ಕಾಶಿಯಲ್ಲಿ ಅಧ್ಯಯನ ಪೂರ್ಣಗೊಳ್ಳುವ ಹಂತದಲ್ಲಿದ್ದ ಸಂದರ್ಭದಲ್ಲಿ ಉತ್ತರ ಕರ್ನಾಟಕದಲ್ಲಿ 'ಭೀಕರ ಬರಗಾಲ' ಪರಿಸ್ಥಿತಿ ಉಂಟಾಗಿ ಮಳೆ – ಬೆಳೆ ಇಲ್ಲದೆ ಹಳ್ಳಿಯ ಜನರು, ದನ – ಕರುಗಳು ಆಹಾರ – ನೀರು ಇಲ್ಲದೇ ಸಂಕಷ್ಟಕ್ಕೆ ಒಳಗಾದರು. ಈ ಸುದ್ಧಿ – ಸಮಾಚಾರ ಸಹಪಾಠಿಗಳಿಂದ ತಿಳಿದ ಮಹಾಂತದೇವರು ಸವದಿ ಮಠದ ಭಕ್ತರಿಗೆ ಆರ್ಥಿಕವಾಗಿ ಭಾರವಾಗಬಾರದೆಂದು ನಿರ್ಧರಿಸಿ, ಕಾಶಿಯಿಂದ ನೇರವಾಗಿ ಸವದಿ ಗ್ರಾಮಕ್ಕೆ ಬಂದರು. ತಮ್ಮ ಶ್ರೀಮಠದ ಭಕ್ತರ ಹಾಗೂ ಗ್ರಾಮದ ಎಲ್ಲ ಜನರ ಬವಣೆ – ತೊಂದರೆಗಳನ್ನು ಕಂಡರು. **'ಭಕ್ತರ ಸೇವೆಯೇ ಸ್ವಾಮಿಯ ಕಾಯಕ'** ವೆಂದು ನಿರ್ಧರಿಸಿ ಗ್ರಾಮದ ನಾಲ್ಕಾರು ಜನ ಹಿರಿಯ ಭಕ್ತರನ್ನು ಕರೆದುಕೊಂಡು ಸುತ್ತು–ಮುತ್ತಲಿನ ಗ್ರಾಮಗಳಲ್ಲಿ ಸಂಚರಿಸಿ ಅಲ್ಲಲ್ಲಿಯ ಜಮೀನುದಾರರು, ಶ್ರೀಮಂತ ಗೌಡರು, ಶೆಟ್ಟರಲ್ಲಿ ಹೋಗಿ ದವಸ – ಧಾನ್ಯಗಳನ್ನು ಸಂಗ್ರಹಿಸಿ ಹತ್ತಾರು ಗ್ರಾಮಗಳಲ್ಲಿ **'ಗಂಜಿ ಕೇಂದ್ರ'** ಗಳನ್ನು ಪ್ರಾರಂಭಿಸಿ ಜನರಿಗೆ **'ದಾಸೋಹ'** ಮಾಡಿದರು. ಇದಲ್ಲದೇ ದನ – ಕರುಗಳಿಗಾಗಿ, ಕುರಿಗಳಿಗಾಗಿ ಪಶುಶಾಲೆ – ಗೋಶಾಲೆಗಳನ್ನು ಪ್ರತಿ ಊರಲ್ಲಿ ಪ್ರಾರಂಭಿಸಿ ಮೇವು – ನೀರಿನ ವ್ಯವಸ್ಥೆ ಕಲ್ಪಿಸಿದರು. ೨೨ ವರುಷಗಳ ತರುಣ ಸನ್ಯಾಸಿ, ಮಹಾಂತಸ್ವಾಮಿಗಳು ಗ್ರಾಮೀಣ ಜನತೆಯ ಪಾಲಿಗೆ ನಿಜಾರ್ಥದಲ್ಲಿ ಮಹಾಂತ 'ದೇವರು' ಆದರು.

'ಬರಗಾಲ' ದೂರಾಗಿ ಮಳೆಗಾಲ ಪ್ರಾರಂಭವಾಗಿ ಜನರು ನೆಮ್ಮದಿಯ ಉಸಿರು ಬಿಟ್ಟರು. ಅನಂತರ ಪೂಜ್ಯರು ಗದಗಿನ 'ವೀರೇಶ್ವರ ಪುಣ್ಯಾಶ್ರಮ' ಕ್ಕೆ ಬಂದು ಅಲ್ಲಿ ಕೆಲ ವರ್ಷವಿದ್ದು ಸಂಗೀತ ಸಾಧನೆ, ಬಸವಾದಿ ಶರಣರ ವಚನ ಸಿದ್ಧಾಂತ, ಚಾಮರಸನ ಪ್ರಭುಲಿಂಗ ಲೀಲೆ, ಭೀಮಕವಿಯ ಬಸವಪುರಾಣ ಮುಂತಾದ ಕಾವ್ಯಗಳ ಅಧ್ಯಯನ, ಪ್ರವಚನ ಕಲೆ ಕರಗತಮಾಡಿಕೊಂಡರು. ಗದಗದಿಂದ ನವಿಲಗುಂದಕ್ಕೆ ಬಂದು ಅಲ್ಲಿಯ 'ಗವಿಮಠ' ದಲ್ಲಿದ್ದು ಅಲ್ಲಿಯ ಪೂಜ್ಯ ಹಿರಿಯ ಗುರುಗಳಾಗಿದ್ದ ಶ್ರೀ. ಮ. ನಿ. ಪ್ರ. ಬಸವಲಿಂಗಸ್ವಾಮಿಗಳವರ ಮಾರ್ಗದರ್ಶನದಲ್ಲಿ **'ಚರಜಂಗಮ'**ವಾಗಿ ನಾಡಿನಾದ್ಯಂತ ಪ್ರಭುಲಿಂಗ ಲೀಲೆ ಹಾಗೂ ಬಸವಪುರಾಣ ಪ್ರವಚನ ಕಾಯಕ ಕೈಕೊಂಡರು. ಬಸವತತ್ತ್ವ ಪ್ರಸಾರ ಗೈಯುತ್ತಾ ಜನಮಾನಸದಲ್ಲಿದ್ದ ಮೂಢನಂಬಿಕೆ–ಕಂದಾಚಾರಗಳನ್ನು ದೂರ ಮಾಡತೊಡಗಿದರು.

ಸವದಿ ಗ್ರಾಮದ ಭಕ್ತರ ಅಪೇಕ್ಷೆಯಂತೆ ೩೨ ವರುಷಗಳ ತರುಣ ಮಹಾಂತದೇವರು 'ಸವದಿ'ಯಲ್ಲಿ ಪುರಾಣ ಪ್ರವಚನ ಮಾಡಿದರು. ೧೯೬೧ರಲ್ಲಿ

ಸವದಿಯ ವಿರಕ್ತಮಠಕ್ಕೆ ವಿಧ್ಯುಕ್ತವಾಗಿ 'ನಿರಂಜನ ಜಂಗಮ ಸ್ಥಲ' ಸ್ವೀಕರಿಸಿ ಪಟ್ಟಾಭಿಷೇಕವಾಗಿ **'ಶ್ರೀ. ಮ. ನಿ. ಪ್ರ ಮಹಾಂತ ಸ್ವಾಮಿಗಳು'** ಎಂಬ ನೂತನ ಅಭಿದಾನ ಪಡೆದರು. ಅನಂತರ ಪೂಜ್ಯರು ಕರ್ನಾಟಕದಾದ್ಯಂತ ಬಸವಪುರಾಣ, ಪ್ರಭುಲಿಂಗಲೀಲೆ, ತೋಂಟದ ಸಿದ್ಧಲಿಂಗೇಶ್ವರ ಪುರಾಣಗಳನ್ನು ಸಂಗೀತ ಮೂಲಕ ಸುಶ್ರಾವ್ಯವಾಗಿ ಹಾಡುತ್ತಾ, ಪ್ರವಚನ ಮಾಡುತ್ತಾ ಉತ್ತರಕರ್ನಾಟಕ ಹಾಗೂ ಗಡಿ ನಾಡಿನಲ್ಲೆಲ್ಲ ಬಸವತತ್ತ್ವ ಸಂದೇಶ ತಲುಪಿಸತೊಡಗಿದರು.

'ಬಯಸಿಬಂದುದು ಅಂಗಭೋಗ, ಬಯಸದೇ ಬಂದುದು ಲಿಂಗಪ್ರಸಾದ' ಎಂಬ ಶರಣರ ವಚನದಂತೆ ಸವದಿಯ ಮಹಾಂತ ಸ್ವಾಮಿಗಳು ೧೯೭೦ ರಲ್ಲಿ ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಮಠ ಇಳಕಲ್ಲಕ್ಕೆ ೧೯ ನೆಯ ಪೀಠಾಧಿಕಾರಿಯಾಗುವ ಯೋಗ ಒದಗಿ ಬಂದಿತು. ಚಿತ್ತರಗಿ ಪೀಠದ ೧೮ ನೆಯ ಗುರುಗಳು ಆಕಸ್ಮಿಕವಾಗಿ ಲಿಂಗೈಕ್ಯರಾದುದರಿಂದ, ಚಿತ್ತರಗಿ-ಇಳಕಲ್ಲ ಸಂಸ್ಥಾನ ಮಠಕ್ಕೆ ಅಲ್ಲಿಯ ಲಕ್ಷಾಂತರ ಭಕ್ತರ ಅಪೇಕ್ಷೆಯಂತೆ ೧೯೭೦ ನೆಯ ಇಸ್ವಿ ಮೇ ೧೭ ರಂದು ಪಟ್ಟಾಭಿಷೇಕ ಜರುಗಿ ಚಿತ್ತರಗಿ ಪೀಠದ ೬೯ ಶಾಖಾಮಠಗಳಿಗೆಲ್ಲ ಗುರುವಾದರು.

'ಚಿತ್ತರಗಿ ಪೀಠ' ವು ೧೨ ನೆಯ ಶತಮಾನದ ವಿಶ್ವಗುರು ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದ 'ಶೂನ್ಯಪೀಠ' ದ ಅಧ್ಯಕ್ಷರಾದ ನಿರಂಜನ ಜಂಗಮವಿಭು ಅಲ್ಲಮಪ್ರಭುದೇವರಿಂದ ಸ್ಥಾಪಿಸಲ್ಪಟ್ಟು ಅವರೊಂದಿಗಿದ್ದ ಶ್ರೀ ಗುರುಮಹಾಂತ ಗುರುಗಳನ್ನು ಮೊದಲ ಗುರುವಾಗಿ ನೇಮಿಸಿ ಮುಂದೆ ಸಂಚಾರ ಕೈಕೊಂಡರು. ಅನಂತರ ೧೫ ನೆಯ ಶತಮಾನದಲ್ಲಿ ನಿರಂಜನ ಜಗದ್ಗುರು ತೋಂಟದ ಸಿದ್ಧಲಿಂಗೇಶ್ವರರು ಸಂಚರಿಸುತ್ತಾ ಚಿತ್ತರಗಿ ಗ್ರಾಮಕ್ಕೆ ದಯಮಾಡಿಸಿದಾಗ, ಚಿತ್ತರಗಿ ಭಕ್ತರ ಕೋರಿಕೆಯಂತೆ ತಮ್ಮ ಜೊತೆಗಿದ್ದ ವಿಜಯ ಮಹಾಂತ ಸ್ವಾಮಿಗಳೆಂಬ ಸಾಧಕರನ್ನು ಚಿತ್ತರಗಿ ಪೀಠಕ್ಕೆ ನೀಡಿದರು. ಶ್ರೀ ವಿಜಯ ಮಹಾಂತಸ್ವಾಮಿಗಳವರಿಂದ ಪ್ರಾರಂಭಗೊಂಡು ೨೦ ನೆಯ ಶತಮಾನದ ೧೯ ನೆಯ ಪೀಠಾಧಿಪತಿ ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳ ಮೂಲಕ ದೇಶ-ವಿದೇಶಗಳಲ್ಲೆಲ್ಲಾ ಪ್ರಖ್ಯಾತವಾಯಿತು.

ಪೂಜ್ಯ ಶ್ರೀ ಮಹಾಂತ ಸ್ವಾಮಿಗಳು ೧೯೭೦ ಮೇ ೧೭ ರಂದು ಚಿತ್ತರಗಿ-ಇಳಕಲ್ಲ ಸಂಸ್ಥಾನ ಮಠದ ಗುರುಗಳಾದ ನಂತರದಿಂದ ೨೦೧೮ ಮೇ ೧೯ರವರೆಗೆ ಅಖಂಡ ೪೮ ವರುಷಗಳ ಕಾಲ ಸಾಧಿಸಿದ ಸಾಧನೆ ಅಪ್ರತಿಮವಾದುದು. ಶಿಥಿಲಗೊಂಡಿದ್ದ ಎಲ್ಲ ಶಾಖಾಮಠಗಳ ಜೀರ್ಣೋದ್ಧಾರ, ಪುನರ್‌ನಿರ್ಮಾಣ, ಮಠಗಳಲ್ಲಿ ವಚನಪಾಠ ಶಾಲೆಗಳ ಸ್ಥಾಪನೆ, ಬಸವಕೇಂದ್ರ, ವಿಜಯಮಹಾಂತೇಶ ತರುಣ ಸಂಘ, ಅಕ್ಕನಬಳಗ ಕರ್ತೃ ಗದ್ದುಗೆಗಳ ಮೇಲೆ ಧರ್ಮಗ್ರಂಥ ವಚನ ಸಾಹಿತ್ಯ ಸ್ಥಾಪನೆ, ವಚನಾಭಿಷೇಕ, ವಚನ ಪಠಣ, ಶಿವಾನುಭವ ಗೋಷ್ಠಿ, ಶರಣ ಸಂಸ್ಕೃತಿ ಮಹೋತ್ಸವ, ವಿಶ್ವಬಸವಧರ್ಮ ಸಮಾವೇಶ, ಭಕ್ತರ ಮನೆಗಳಲ್ಲಿ ಮಹಾಮನೆ ಕಾರ್ಯಕ್ರಮಗಳು, ನೂತನ ಮನೆಗಳ

ಗುರುಪ್ರವೇಶ ಸಮಾರಂಭ, ನಾಗರ ಪಂಚಮಿ ಹಾಲು ಕುಡಿವ ಹಬ್ಬವಾಗಿ ಆಚರಣೆ ಜಂಗಮ ದಾಸೋಹ ನಿಧಿ, ನಿರಂತರ ಪ್ರಸಾದ ದಾಸೋಹ, ಬಸವತತ್ವಾಧಾರಿತ ವರದಕ್ಷಣೆ ರಹಿತ ಕಲ್ಯಾಣಮಹೋತ್ಸವಗಳು, ವಚನ ಮಾಂಗಲ್ಯ, ವಚನ ಪುಸ್ತಕಗಳ ಪ್ರಕಟನೆ–ಪ್ರಸಾರ, ದೇಶ–ವಿದೇಶಗಳಲ್ಲಿ ಉಚಿತವಾಗಿ ಲಕ್ಷಾಂತರ ಭಕ್ತರಿಗೆ ಇಷ್ಟಲಿಂಗ ದೀಕ್ಷೆ, ಬಸವಕಲ್ಯಾಣ ಅನುಭವಮಂಟಪದಲ್ಲಿ ದಾಸೋಹನಿಧಿ ಸಂಗ್ರಹಿಸಲು ರಾಜ್ಯಾದ್ಯಂತ ಬಸವಸಂದೇಶ ಯಾತ್ರೆ, ದೇವದಾಸಿ ವಿಮೋಚನಾ ಸಂಸ್ಥೆ, ದೇವದಾಸಿಯರ ಮಕ್ಕಳಿಗಾಗಿ ಗುರುಬಸವ ಪ್ರಸಾದ ಟ್ರಸ್ಟ್ ಸ್ಥಾಪನೆ, ನಿರುದ್ಯೋಗಿಗಳಿಗಾಗಿ–ವಿಧವೆಯರಿಗಾಗಿ ಕಾಯಕ ಸಂಜೀವಿನಿ ಸಂಸ್ಥೆ ಸ್ಥಾಪನೆ – ಯಂತ್ರೋಪಕರಣಗಳ ವಿತರಣೆ, ಲಿಂಗವಂತ ಧರ್ಮ ಗ್ರಂಥ ಬಹುಮಾನ ಯೋಜನೆ–ಶರಣಸಾಹಿತಿಗಳ ಗ್ರಂಥಗಳಿಗೆ ಪುರಸ್ಕಾರ, ಸಮಾಜದ ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಬಸವಗುರು ಕಾರುಣ್ಯ ಪ್ರಶಸ್ತಿ, ಚಿತ್ತರಗಿ ಶ್ರೀ ವಿಜಯಮಹಾಂತೇಶ್ವರ ಧರ್ಮಪ್ರಸಾರಕ ಮಂಡಲ ಪ್ರಕಾಶನ ಮೂಲಕ ಶರಣಸಾಹಿತ್ಯ ಗ್ರಂಥಗಳ ಪ್ರಕಟಣೆ, ಬಸವತತ್ತ್ವ–ಸಾಹಿತ್ಯ–ಸಂಸ್ಕೃತಿ ಪ್ರಸಾರಕ್ಕಾಗಿ ಪ್ರೊ.ಸಿದ್ಧಣ್ಣ ಲಂಗೋಟಿ ಅವರ ಗೌ ॥ ಸಂಪಾದಕತ್ವದಲ್ಲಿ ಬಸವ ಬೆಳಗು ತ್ರೈಮಾಸಿಕ ಪತ್ರಿಕೆ ಪ್ರಾರಂಭಿಸಿದ್ದು, ಕಲ್ಯಾಣನಾಡಿನ ಶರಣ ಸಾಹಿತ್ಯ ಪರಿಷತ್ತಿನ ಗೌ॥ ಅಧ್ಯಕ್ಷರಾಗಿ ಮಾರ್ಗದರ್ಶನ, ಶ್ರೀಮಠದಲ್ಲಿ–ಶಾಖಾಮಠಗಳಲ್ಲಿ ಕಾರ್ಯಕ್ರಮಗಳು, ಶಿರೂರದಲ್ಲಿ ಶ್ರೀ ವಿಜಯಮಹಾಂತ ತೀರ್ಥದಲ್ಲಿ ನಿಸರ್ಗ ಚಿಕಿತ್ಸೆ–ಯೋಗ ಕೇಂದ್ರ ಸ್ಥಾಪನೆ, ಧಾರವಾಡದಲ್ಲಿ ಗುರುಬಸವ ಮಹಾಂತ ಟ್ರಸ್ಟ್ ಸ್ಥಾಪನೆಗೆ ಪ್ರೇರಣೆ–ಮಾರ್ಗದರ್ಶನ, ಶ್ರೀ ವಿಜಯ ಮಹಾಂತೇಶ ವಿದ್ಯಾವರ್ದಕ ಸಂಘ ಇಳಕಲ್ಲ, ಶ್ರೀ. ವಿ. ಮ. ಸಂಘ ಹುನಗುಂದ, ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘ ಬಾಗಲಕೋಟೆ, ಚಿತ್ತರಗಿ ಶ್ರೀ ವಿ.ಮ. ಎಜ್ಯುಕೇಶನ್ ಸೊಸೈಟಿ, ಇಳಕಲ್ಲ ಮುಂತಾದ ಶಿಕ್ಷಣ ಸಂಸ್ಥೆಗಳ ಗೌ ॥ ಅಧ್ಯಕ್ಷರಾಗಿ ಮಾರ್ಗದರ್ಶನ, ಚಿತ್ತರಗಿ–ಇಳಕಲ್ಲ ಪೀಠದ ಶಾಖಾಮಠಗಳಿಗೆ ಪರಿಶಿಷ್ಟ ಜಾತಿ, ಪಂಗಡಗಳ ಯೋಗ್ಯ ಯುವಕರಿಗೆ ಧರ್ಮ ಸಂಸ್ಕಾರ ನೀಡಿ ಪಟ್ಟಾಭೀಷೇಕ ಮಾಡಿದ್ದು, ಮಹಿಳಾ ಸಾಧಕಿಯರಿಗೆ ಜಂಗಮದೀಕ್ಷೆ ನೀಡಿ ಮಠಾಧಿಕಾರಿಗಳನ್ನಾಗಿ ಮಾಡಿದ್ದು, ಸಾಮಾಜಿಕ ನ್ಯಾಯ, ಧಾರ್ಮಿಕ ಸಮಾನತೆಗಾಗಿ ಒಳಪಂಗಡಗಳ ಭಕ್ತರ ಮನವೊಲಿಸಿ ಕಲ್ಯಾಣಮಹೋತ್ಸವ ಜರುಗಿಸಿದ್ದು, ಬಸವಕಲ್ಯಾಣ ಅನುಭವ ಮಂಟಪದ ವಿಶ್ವ ಬಸವಧರ್ಮ ಟ್ರಸ್ಟ್‌ನ ಗೌರವ ಅಧ್ಯಕ್ಷರಾಗಿ ಮಾರ್ಗದರ್ಶನ, ದ್ವಾದಶ ಪಿಠಾರೋಹಣ ಕಾಲಕ್ಕೆ ಆದರ್ಶ ರೈತ, ಆದರ್ಶ ನೇಕಾರ, ಆದರ್ಶ ಶರಣಸಾಹಿತಿಗಳ ತುಲಾಭಾರ ಮಾಡಿ ನಿಧಿ ಅರ್ಪಿಸಿದ್ದಾರೆ.

'ರಾಷ್ಟ್ರೀಯ ಬಸವ ಪುರಸ್ಕಾರ ಹಾಗೂ ಸಂಯಮ ಪ್ರಶಸ್ತಿ'ಯ ಪುರಸ್ಕಾರ ಮೂಲಕ ಬಂದ ೧೧ ಲಕ್ಷ ರೂಪಾಯಿಗಳನ್ನು ನಾಡಿನ ಹೆಸರಾಂತ ೧೧ ಸಾಹಿತಿಗಳಿಗೆ ಒಂದೊಂದು ಲಕ್ಷ ರೂಪಾಯಿಗಳಂತೆ ನೀಡಿ ಬಸವಗುರು ಕಾರುಣ್ಯ ಪ್ರಶಸ್ತಿ ಮೂಲಕ ನೀಡಿದ್ದು, **ಶ್ರೀ ವಿಜಯ ಮಹಾಂತ ಶಿವಯೋಗಿಗಳ ಜನ್ಮ ಶತಮಾನೋತ್ಸವ ಆಚರಣೆ** ಕಾಲಕ್ಕೆ ೧೦೧ ಆದರ್ಶ ರೈತರಿಗೆ ೧೦೧ ಆಕಳು (ಹಸು)

ಗಳನ್ನು ಉಚಿತವಾಗಿ ನೀಡಿ ಗೌರವಿಸಿದ್ದು, ೧೦೧ ಜನ ವಿಧವಾ ತಾಯಂದಿರಿಗೆ ಇಳಕಲ್ಲ ರೇಷ್ಮೆ ಸೀರೆ ನೀಡಿ ಗೌರವ ಸತ್ಕಾರ, ೧೦೧ ಜನ ನಿವೃತ್ತ ಸೈನಿಕರಿಗೆ ಗೌರವ ಸನ್ಮಾನ, ೧೦೧ ಜನ ಆದರ್ಶ ಶಿಕ್ಷಕ–ಶಿಕ್ಷಕಿ ದಂಪತಿಗಳಿಗೆ ಗೌರವ ಸನ್ಮಾನ, ೧೦೧ ಜನ ಶರಣ–ದಂಪತಿಗಳಿಗೆ ಗೌರವ ಸತ್ಕಾರ ಹಾಗೂ ಸರ್ವಧರ್ಮಗಳ ಗುರುಗಳಿಗೆ **'ಭಾರತ ಸಂವಿಧಾನ'** ಗ್ರಂಥ ಅವರ ತಲೆಯ ಮೇಲೆ ಇರಿಸಿ ಪ್ರತಿಜ್ಞೆ ಮೂಲಕ ಸಂವಿಧಾನ ಗೌರವ, ರಾಷ್ಟ್ರೀಯ ಭಾವೈಕ್ಯತೆ ಮೂಡುವಂತೆ ಮಾಡಿದ್ದು, ಶ್ರೀ ಸಂಸ್ಥಾನಮಠದ ನೂರಾರು ಎಕರೆ ಭೂಮಿಯನ್ನು ಆಯಾ ಗ್ರಾಮಗಳ ರೈತರಿಗೆ ಕೃಷಿ ಮಾಡಿ ಬದುಕಲು ನೀಡಿದ್ದು, ಸರ್ವ ಜನಾಂಗಗಳ ಬಡ ವಿದ್ಯಾರ್ಥಿಗಳಿಗಾಗಿ ಎಲ್ಲಾ ಶಾಖಾಮಠಗಳಲ್ಲಿ ಉಚಿತ ಪ್ರಸಾದ ನಿಲಯಗಳ ಸ್ಥಾಪನೆ, ಬಸವಭೂಮಿಯಿಂದ ಆಂಗ್ಲನಾಡಿಗೆ (ಯುರೋಪ ರಾಷ್ಟ್ರಗಳಿಗೆ) ಬೇಲಿಮಠ ಶ್ರೀಗಳು, ಶ್ರೀ ಬಿ. ಎಲ್. ಪಾಟೀಲ, ಪ್ರೊ. ಸಿದ್ಧಣ್ಣ ಲಂಗೋಟಿಯವರ ಸಹಿತ ಹೋಗಿ ಬಸವತತ್ತ್ವ ಪ್ರಸಾರಕ್ಕಾಗಿ ಬಸವ ಇಂಟರನ್ಯಾಶನಲ್ ಫೌಂಡೇಶನ್ ಲಂಡನ್ ಮಹಾನಗರದಲ್ಲಿ ೧೯೯೦ ರಲ್ಲಿ ಸ್ಥಾಪಿಸಿ ಬಂದಿದ್ದು ಈ ಎಲ್ಲ ಕಾರ್ಯ–ಸಾಧನೆಗಳಿಗೆ ಕಿರೀಟವಿಟ್ಟಂತಾಗಿದೆ.

ಪೂಜ್ಯರು ೧೯೭೫–೭೬ ರಲ್ಲಿ ಸ್ಥಾಪಿಸಿ–ಹುಟ್ಟು ಹಾಕಿದ ಎರಡು ಕ್ರಿಯಾ ಯೋಜನೆಗಳು –

೧) ಶರಣ ಸಿದ್ಧಾಂತ ವಿದ್ಯಾಪೀಠ – ಶಿವಾನುಭವ ತರಬೇತಿ ಶಿಬಿರಗಳು.

೨) ಮಹಾಂತಜೋಳಿಗೆ – ವ್ಯಸನ ಮುಕ್ತಿ ಆಂದೋಲನ

'ಮಹಾಂತ ಜೋಳಿಗೆ' ಯ ಪರಿಕಲ್ಪನೆ (concept) ಉಗಮದ ಹಿನ್ನೆಲೆ :

೧೨ ನೆಯ ಶತಮಾನವು ಭಾರತೀಯ ಧರ್ಮೇತಿಹಾಸದಲ್ಲಿ ಒಂದು ಸುವರ್ಣಯುವಾಗಿದೆ. ಅಂದಿನ ಕಾಲದಲ್ಲಿ ರಾಜ–ಮಹಾರಾಜರು, ಚಕ್ರವರ್ತಿಗಳು ತಮ್ಮ ಶಕ್ತಿ–ಸಾಮರ್ಥ್ಯಗಳಿಂದ ರಾಜ್ಯಗಳನ್ನು ಸ್ಥಾಪಿಸಿಕೊಂಡು, ಸಾಮ್ರಾಜ್ಯವನ್ನು ಬಾಹುಬಲ–ಬುದ್ಧಿಬಲಗಳಿಂದ ವಿಸ್ತರಿಸುತ್ತಾ ಪ್ರಜೆಗಳನ್ನು ಆಳುತ್ತಿದ್ದರು. ಚಾಲುಕ್ಯ ಅರಸು ಮನೆತನದವರು ಅನೇಕ ರಾಜಕೀಯ ಏಳು–ಬೀಳುಗಳನ್ನು ಕಾಣುತ್ತಾ ಕೊನೆಗೆ **'ಕಲ್ಯಾಣ'**ವನ್ನು ರಾಜಧಾನಿಯಾಗಿ ಮಾಡಿಕೊಂಡು ೧ ನೆಯ ಸೋಮೇಶ್ವರನು ಚಕ್ರವರ್ತಿಯಾಗಿ ರಾಜ್ಯಭಾರ ಮಾಡಿದನು. ಈತನ ಮಗ ೬ ನೆಯ ವಿಕ್ರಮಾದಿತ್ಯನು ಪಟ್ಟಾಭಿಷಕ್ತನಾಗಿ ಚಾಲುಕ್ಯ ಸಾಮ್ರಾಜ್ಯದ ವಿಸ್ತರಣೆಯನ್ನು ದಕ್ಷಿಣಭಾರತದಾದ್ಯಂತ ಮಾಡಿದನು. ಇದಲ್ಲದೇ ಉತ್ತರ ಭಾರತಕ್ಕೂ ದಂಡೆತ್ತಿ ಹೋಗಿ ಅಲ್ಲಿಯ ರಾಜ–ಮಹಾರಾಜರನ್ನು ಸೋಲಿಸಿ, ತನ್ನ ಪ್ರತಿನಿಧಿಗಳಾಗಿ ಮಾಂಡಲಿಕರನ್ನು ನೇಮಿಸಿ ಆಡಳಿತ ನಡೆಸಿದವನು. ಇಂತಹ ಕಲ್ಯಾಣ ಚಾಲುಕ್ಯ ಸಾಮ್ರಾಜ್ಯವನ್ನು ಇವರ ಸಾಮಂತ ರಾಜರಾಗಿದ್ದ ಕಲಚೂರಿ ವಂಶದ ಮಂಗಳವಾಡಿಯ ಬಿಜ್ಜಳ ಭೂಪಾಲನು ೧೨ ನೆಯ ಶತಮಾನದಲ್ಲಿ ಚಕ್ರವರ್ತಿಯಗಿ ಆಡಳಿತ ನಡೆಸಿದ ಕಾಲದಲ್ಲಿ 'ತರ್ದವಾಡಿ ಸಾಸಿರ' ಎಂಬ ಪ್ರಾಂತದ

ಪ್ರಮುಖ ಪಟ್ಟಣ (ಇಂದಿನ ವಿಜಯಪುರ ಜಿಲ್ಲೆಯ) ಇಂಗಳೇಶ್ವರ-ಬಾಗೇವಾಡಿಯಾಗಿತ್ತು. ಈ ಬಾಗೇವಾಡಿಯು ಆಗಮಿಕ ಶೈವ ಬ್ರಾಹ್ಮಣರ ಅಗ್ರಹರವಾಗಿತ್ತು. ಈ ಅಗ್ರಹಾರದ ಅಧಿಪತಿ ಮಂಡಿಗೆಯ ಮಾದಿರಾಜ, ಆತನ ಪತ್ನಿ ಮಾದಲಾಂಬಿಕೆಯ ಉದರದಲ್ಲಿ **ಕ್ರಿ.ಶ. ೧೧೦೫** ರಲ್ಲಿ ಜನಿಸಿದ ಕ್ರಾಂತಿಕಾರಿ ಯುಗಪುರುಷ, ವಿಶ್ವಗುರು ಜಗಜ್ಯೋತಿ ಎಂದು ಖ್ಯಾತರಾದ ಬಸವಣ್ಣನವರು, ಬಾಗೇವಾಡಿ, ಕಪ್ಪಡಿ ಸಂಗಮದ ಗುರುಕುಲದಲ್ಲಿ ಅಧ್ಯಯನಗೈದು, ಮಂಗಳವಾಡಿಯ ಬಿಜ್ಜಳನ ರಾಜಾಸ್ಥಾನದಲ್ಲಿ ರಾಜಭಂಡಾರದ ಕೋಶಾಧಿಕಾರಿಯಾಗಿ, ಅರ್ಥಮಂತ್ರಿಯಾಗಿ ಕಾರ್ಯನಿರ್ವಹಿಸುತ್ತಾ, ಮುಂದೆ ಬಿಜ್ಜಳನು ಕಲ್ಯಾಣ ಚಾಲುಕ್ಯ ಸಾಮ್ರಾಜ್ಯದ ಭೂಪಾಲನಾದಾಗ, ಕಲ್ಯಾಣ ರಾಜಧಾನಿಯಲ್ಲಿ ಹಿರಿಯ ದಂಡನಾಯಕರಾಗಿ, ಪ್ರಧಾನಮಂತ್ರಿಯಾಗಿ ಕಾಯಕ ಮಾಡುತ್ತಾ ಕಲ್ಯಾಣ ಸಾಮ್ರಾಜ್ಯವನ್ನು ಅಭಿವೃದ್ಧಿಗೊಳಿಸಿದವರು.

ರಾಜ-ಮಹಾರಾಜರ ಆಡಳಿತವಿದ್ದ ಕಾಲದಲ್ಲಿಯೇ **ಕ್ರಿ.ಶ.೧೧೪೦** ರಲ್ಲಿ ಕಲ್ಯಾಣ ರಾಜಧಾನಿಯಲ್ಲಿ ಜಗತ್ತಿನ ಪ್ರ-ಪ್ರಥಮವೆಂದೆನಿಸಿರುವ ಪ್ರಜಾಪ್ರಭುತ್ವ ಮಾದರಿಯ ಪಾರ್ಲಿಮೆಂಟ್ ಎಂದೇ ಖ್ಯಾತವಾಗಿರುವ **'ಅನುಭವ ಮಂಟಪ'** ಎಂಬ ಸಂಸತ್‌ನ್ನು ಸ್ಥಾಪಿಸಿದವರು ಬಸವಣ್ಣನವರು. ಈ ಸಂಸತ್ತಿನಲ್ಲಿ ಅಂದಿನ ಕಾಲದಲ್ಲಿ **೭೭೦** ಜನ ಅಮರಗಣಂಗಳೆನಿಸಿದ ಶರಣ-ಶರಣೆಯರು ಸದಸ್ಯರಾಗಿದ್ದರು. ಇವರು ಭಾರತದ ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ, ಗಾಂಧಾರದೇಶದಿಂದ – ಬ್ರಹ್ಮದೇಶದವರೆಗಿನ ವಿವಿಧ ಪ್ರಾಂತಗಳಿಂದ ಕಲ್ಯಾಣಕ್ಕೆ ಆಗಮಿಸಿದವರಾಗಿದ್ದರು. ಅಲ್ಲಮಪ್ರಭುದೇವರ ಅಧ್ಯಕ್ಷತೆಯಲ್ಲಿ, ಚೆನ್ನಬಸವಣ್ಣನವರ ಸಂಚಾಲಕತ್ವದಲ್ಲಿ ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ಚರ್ಚೆ-ಚಿಂತನಗಳ ಮೂಲಕ ಮೂಡಿ ಬಂದ **'ವಚನ'**ಗಳು ವಿನೂತನವಾದ ಸಾಹಿತ್ಯ-ದರ್ಶನವಾದವು.

'ಸಕಲಜೀವಾತ್ಮರ ಲೇಸು-ಮಾನವಕುಲದ ಕಲ್ಯಾಣ' ಬಸವಾದಿ ಶರಣರ ಧ್ಯೇಯವಾಗಿತ್ತು. 'ಸಮತೆ-ಸ್ವಾತಂತ್ರ್ಯ-ಬಂಧುತ್ವ-ಮಾನವೀಯತೆ' ಬಸವಧರ್ಮದ, ಶರಣ ಸಮಾಜದ ತಳಹದಿಯಾಗಿತ್ತು. **ಕ್ರಿ.ಶ.೧೧೬೭ರಲ್ಲಿ ಕಲ್ಯಾಣಕ್ರಾಂತಿ** ಜರುಗಿದ ತರುವಾಯ **ಕ್ರಿ.ಶ. ೧೫ ನೆಯ** ಶತಮಾನದಲ್ಲಿ ಶರಣ ಪರಂಪರೆಯ ಮಠ-ಪೀಠಗಳು ನಾಡಿನಾದ್ಯಂತ ಪ್ರಾರಂಭಗೊಂಡು ಬಸವತತ್ತ್ವ ಪ್ರಸಾರದ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತ ಸಮಾಜೋ-ಧಾರ್ಮಿಕ ಕಾರ್ಯಮಾಡತೊಡಗಿದವು. ಈ ಮಠ-ಪೀಠಗಳಲ್ಲಿ ಒಂದಾದ **'ಚಿತ್ತರಗಿ ಪೀಠ'** ಪರಂಪರೆಯು ಚಿತ್ತರಗಿ-ಇಳಕಲ್ಲ ಸಂಸ್ಥಾನಮಠವೆಂದು ಖ್ಯಾತಿಯನ್ನು ಪಡೆದಿದೆ. ಈ ಪೀಠದ ೧೯ ನೆಯ ಅಧಿಪತಿಗಳಾಗಿ ಕ್ರಿ.ಶ.೧೯೭೦ರಲ್ಲಿ ಗುರುಗಳಾಗಿ ಬಂದವರೇ **ಪೂಜ್ಯ ಶ್ರೀ ಮಹಾಂತ ಸ್ವಾಮಿಗಳವರು.**

ನಾಡಿನ ಮಠಾಧಿಪತಿಗಳನ್ನು ಸಂಘಟಿಸಿ ಬಸವಾದಿ ಶರಣರ ಸಮಾನತೆಯ ತತ್ವಗಳ ಪ್ರಸಾರ ಹಾಗೂ ಸಮಾಜೋದ್ಧಾರದ ಕಾರ್ಯಗಳನ್ನು ಯೋಜನಾಬದ್ಧವಾಗಿ

ಕೈಕೊಳ್ಳಬೇಕೆಂಬ ಮಹದುದ್ಧೇಶದಿಂದ ೧೯೭೪ ನವ್ಹೆಂಬರ ತಿಂಗಳಲ್ಲಿ 'ಮಠಾಧಿಪತಿಗಳ ಸಮ್ಮೇಳನ' ಆಯೋಜಿಸಿದರು. ಅದು ಕೆಲವರ ಪ್ರತಿಷ್ಠೆ-ಹಿತಾಸಕ್ತಿಗಳಿಂದಾಗಿ ಫಲಪ್ರದವಾಗಲಿಲ್ಲ. ಈ ಸಮಾವೇಶದ ಪರಿಣಾಮವನ್ನು ಮನಗಂಡ ಪೂಜ್ಯ ಮಹಾಂತ ಸ್ವಾಮಿಗಳು ಸ್ವತಃ ತಾವೇ ಹಗಲಿರುಳು ಚಿಂತನ-ಮಂಥನ ಗೈಯುತ್ತಾ ೧೯೭೫ ನವ್ಹೆಂಬರ ತಿಂಗಳಲ್ಲಿ ಒಂದು ನಿರ್ಧಾರಕ್ಕೆ ಬಂದರು. ಅದೇ ಸಂದರ್ಭದಲ್ಲಿ ಹುನಗುಂದಲ್ಲಿ ಶ್ರೀ ವಿಜಯಮಹಾಂತೇಶ ಮಠದ ಭಕ್ತನಾಗಿದ್ದ ೩೦-೩೨ ವರುಷದ ಪರಿಶಿಷ್ಟ ಜಾತಿಯ ತರುಣನೊಬ್ಬ ನಿಧನನಾದ ಸುದ್ಧಿ ತಿಳಿದು, ಶರಣ ಮಾದಾರ ಚೆನ್ನಯ್ಯನ ಕೇರಿಯಲ್ಲಿದ್ದ ಆತನ ಮನೆಗೆ ಪೂಜ್ಯರು ಮಠದ ಹಿರಿಯಭಕ್ತರೊಂದಿಗೆ ಹೋದರು. ಆ ಭಕ್ತನ ಪತ್ನಿ ಹಾಗೂ ಎರಡು ಚಿಕ್ಕ ಮಕ್ಕಳು ಅನ್ನ-ನೀರು ಇಲ್ಲದೇ ದುಃಖಿಸುತ್ತಿದ್ದುದನ್ನು ಕಂಡರು, ಇಂತಹ ಸಾವಿರಾರು ಕುಟುಂಬಗಳು ಕುಡಿತದ ಚಟದಿಂದ ಹಾಳಾಗಬಾರದೆಂದು ಯೋಚಿಸಿದರು. ಆ ತಾಯಿ-ಮಕ್ಕಳಿಗೆ ಶ್ರೀಮಠದಿಂದ ದವಸ-ಧಾನ್ಯ, ಆರ್ಥಿಕ ಸಹಾಯ ನೀಡಿ ಸಾಂತ್ವನ ಹೇಳಿ ಮಠಕ್ಕೆ ಬಂದರು. ಪೂಜ್ಯರ ಅಂತರಂಗದ ಅಂತಃಕರಣ ಕಳಕಳಿಯು ಮೂರ್ತರೂಪಗೊಂಡು ಕ್ರಿಯಾರೂಪ ತಾಳಿದ ಯೋಜನೆಯೇ **'ಮಹಾಂತ ಜೋಳಿಗೆ'** ಯಾಗಿದೆ.

'ಮಹಾಂತ' ಎಂದರೆ ಧರ್ಮಾಧಿಕಾರಿ, ಧರ್ಮದ ಗುರು, ಸ್ವಾಮಿ, ಇನ್ನು **ಜೋಳಿಗೆ** ಎಂದರೆ 'ಅರಿವೆಯ ಚೀಲ', ಮಠದ ಸ್ವಾಮಿಗಳು ದಾಸೋಹ ನಡೆಸುವ ಸಲುವಾಗಿ ಭಕ್ತರ ಮನೆ ಮನೆಗೆ ಅಡ್ಡಾಡಿ ದವಸ, ಧಾನ್ಯ, ಹಿಟ್ಟು-ರೊಟ್ಟಿಗಳನ್ನು ಭಿಕ್ಷೆ ಬೇಡುತ್ತಾ ಸಂಗ್ರಹಿಸಿ ತಂದು ಮಠದಲ್ಲಿದ್ದು ಓದುವ ಬಡಮಕ್ಕಳಿಗೆ ಪ್ರಸಾದ ನೀಡುವ ಕಾರ್ಯ ಮಾಡುತ್ತಾ ಬಂದಿರುವುದನ್ನು ಕಾಣುತ್ತೇವೆ.

ಈ ಚಿತ್ತರಗಿ ಪೀಠದ ಇಳಕಲ್ಲ ಮಹಾಂತ ಸ್ವಾಮಿಗಳು ಹಿಡಿದ ಜೋಳಿಗೆ ಕಣ್ಣಿಗೆ ಕಾಣದ ಒಂದು **ವಿನೂತನ ಜೋಳಿಗೆ,** ವ್ಯಕ್ತಿ-ಕುಟುಂಬ ಹಾಳು ಮಾಡುವ, ಸಮಾಜ-ದೇಶ ಹಾಳು ಮಾಡುವ ದುರ್ವ್ಯಸನ-ದುಶ್ಚಟಗಳನ್ನು ಭಿಕ್ಷೆ ಬೇಡುತ್ತಾ ಪರಿವರ್ತಿಸುವ ಸಮಾಜ ಸುಧಾರಕ **ಮಹಾಂತ ಜೋಳಿಗೆ,** ಪೂಜ್ಯರು ಯಾವ ಕೇರಿಯಲ್ಲಿ ಕುಡಿತದ ಚಟದಿಂದ ತರುಣ ಗೃಹಸ್ಥನೊಬ್ಬ ಮರಣಹೊಂದಿ, ಹೆಂಡತಿ ಮಕ್ಕಳು ಅನಾಥವಾಗಿ ಕಣ್ಣೀರು ಸುರಿಸುತ್ತಿದ್ದರೋ, ಅದೇ ಕೇರಿಗೆ ಪ್ರಪ್ರಥಮವಾಗಿ 'ಮಹಾಂತ ಜೋಳಿಗೆ' ಹಿಡಿದು ತಮ್ಮ ಶ್ರೀಮಠದ ಭಕ್ತರೊಂದಿಗೆ ಪಾದಯಾತ್ರೆಯ ಮೂಲಕ ಪ್ರವೇಶಿಸಿದರು. ಶರಣ ಮಾದಾರ ಚೆನ್ನಯ್ಯನ ಕೇರಿಯ ಗುಡಿಸಲು ಮನೆಗಳಿಗೆಲ್ಲ ಹೋದರು. ದುರ್ವ್ಯಸನ-ದುಶ್ಚಟಗಳ ದುಷ್ಪರಿಣಾಮಗಳ ಕುರಿತು ತಾಯಿ ಕರುಳಿನ, ಮಾತೃಹೃದಯದ ಮಹಾಂತಪ್ಪಗಳು ಕೇರಿಯ ಬಂಧು-ಬಾಂಧವರಿಗೆ, ಮಕ್ಕಳು-ಮರಿಗಳಿಗೆಲ್ಲ ತಿಳಿವಳಿಕೆ ನೀಡಿದರು. ಪೂಜ್ಯರ ಅಂತಃಕರಣದ ಕಳಕಳಿಯ ಮಾತುಗಳಿಗೆ ಮನ ಕರಗಿ, ಜನರು ಪರಿವರ್ತನೆಯಾದರು. ಪೂಜ್ಯರ ಪಾದಗಳಿಗೆ ನಮಸ್ಕರಿಸಿ ತಮ್ಮ ಚಟಗಳನ್ನೆಲ್ಲ ಜೋಳಿಗೆಗೆ ನೀಡಿದರು.

ಮಹಾಂತ ಜೋಳಿಗೆಯ ಮೊದಲ ದಿನದ 'ಸಂಚಾರ' ಅದ್ಭುತವಾದ ಯಶಸ್ಸು ಸಾಧಿಸಿತು. ಮಹಾಂತಪ್ಪಗಳು ದೀನ-ದಲಿತರ **ಬಾಳಿಗೆ ಹೊಸ ಬೆಳಕು** ತೋರಿದರು. ಮಹಾಂತ ಜೋಳಿಗೆಯು ವಿಶ್ವಗುರು ಬಸವಣ್ಣನವರ ವಚನ ಸಂದೇಶವನ್ನು ಅನುಷ್ಠಾನಕ್ಕೆ ತಂದಿರುವ ಕ್ರಿಯಾಯೋಜನೆಯಾಗಿದೆ.

ದುರ್ವ್ಯಸನಿ ದುರಾಚಾರಿ ಎಂದೆನಿಸದಿರಯ್ಯಾ
ಎನ್ನ ಲಿಂಗವ್ಯಸನಿ ಜಂಗಮ ಪ್ರೇಮಿ ಎಂದೆನಿಸಯ್ಯಾ
'ಅವಶ್ಯಮನು ಭೋಕ್ತವ್ಯಂ' ಎಂದೆನಿಸದಿರಯ್ಯಾ
ಕೂಡಲಸಂಗಮದೇವಾ ಸೆರಗೊಡ್ಡಿ ಬೇಡುವೆನು.

ಗುರುಬಸವಣ್ಣನವರ ವಚನದ ಆಶಯದಂತೆ ಪೂಜ್ಯ ಮಹಾಂತಸ್ವಾಮಿಗಳು ಜಾತಿ-ಮತ-ಪಂಥ-ಪಂಗಡ-ಧರ್ಮ-ಭಾಷೆ-ದೇಶವೆನ್ನದೇ ಇಡೀ ಪ್ರಪಂಚವನ್ನೇ ಅಖಂಡ ೪೨ ವರುಷಗಳ ಕಾಲ (೧೯೭೫ ರಿಂದ ೨೦೧೮ ವರೆಗೆ) ಮಹಾಂತ ಜೋಳಿಗೆಗೆ ಚಟಗಳ-ವ್ಯಸನಗಳ ಭಿಕ್ಷೆ ಬೇಡುತ್ತಾ 'ತಂಗಾಳಿ ಪರಿಮಳದೊಡಗೂಡಿ ಸಂಚರಿಸುವಂತೆ ಮಾತೃಹೃದಯಿ ಜಂಗಮವಾಗಿ ಸಂಚರಿಸಿದರು.

ಪೂಜ್ಯ ಮಹಾಂತ ಶಿವಯೋಗಿಗಳು 'ಮಹಾಂತ ಜೋಳಿಗೆ' ಯ ಮೂಲಕ ವ್ಯಸನ ಮುಕ್ತ ವ್ಯಕ್ತಿ-ಕುಟುಂಬ-ಸಮಾಜ-ಗ್ರಾಮಗಳು ನಿರ್ಮಾಣವಾಗಬೇಕೆಂಬ ಸದುದ್ದೇಶದಿಂದ ಕಾರ್ಯಕ್ರಮ ಹಾಕಿಕೊಳ್ಳುವುದರ ಜೊತೆ ಜೊತೆಗೆ, ಜನತೆಗೆ ಸರಿಯಾದ ತಿಳಿವಳಿಕೆ ಉಂಟಾಗಲೆಂಬ ಸದಿಚ್ಛೆಯಿಂದ **'ಶರಣ ಸಿದ್ಧಾಂತ ವಿದ್ಯಾಪೀಠದ ಶಿವಾನುಭವ ತರಬೇತಿ ಶಿಬಿರ'** ಗಳನ್ನು ಹಮ್ಮಿಕೊಳ್ಳುತ್ತಿದ್ದರು. ಈ ಎರಡೂ ಯೋಜನೆಗಳ ಸಂಚಾಲಕರಾಗಿ ಶರಣ ಸಾಹಿತಿಗಳೂ, ಜ್ಞಾನ-ವಿಜ್ಞಾನ-ತತ್ತ್ವಜ್ಞಾನ ಅಧ್ಯಯನ ಮಾಡಿದ್ದ ಪ್ರೊ. ಸಿದ್ಧಣ್ಣ ಲಂಗೋಟಿ ಅವರನ್ನು ತಮ್ಮೊಂದಿಗೆ ಅಖಂಡ ನಾಲ್ಕು ದಶಕಗಳ ಕಾಲ ಕರೆದುಕೊಂಡು ಸಂಚರಿಸಿದರು. ಈ ಎರಡೂ ಕಾರ್ಯಕ್ರಮಗಳ ಉದ್ದೇಶವೆಂದರೆ-ಜನರನ್ನು ವ್ಯಸನಮುಕ್ತರನ್ನಾಗಿಸುವುದು, ವ್ಯಸನ ಮುಕ್ತರಾದವರಿಗೆ ಧಾರ್ಮಿಕ-ನೈತಿಕ ಪ್ರಜ್ಞೆ ಉಂಟಾಗುವಂತೆ ಅರಿವು ನೀಡುವುದಾಗಿತ್ತು. ಈ ಶಿಬಿರ ಮತ್ತು ಮಹಾಂತ ಜೋಳಿಗೆ ಕಾರ್ಯಕ್ರಮಗಳಲ್ಲಿ ನಾಡಿನ ಹೆಸರಾಂತ ವೈದ್ಯರನ್ನು, ಸಮಾಜ ವಿಜ್ಞಾನಿಗಳನ್ನು, ಸಾಹಿತಿಗಳನ್ನು, ಸಮಾಜ ಕಳಕಳಿಯ ಕವಿಗಳನ್ನು, ಧರ್ಮ ಗುರುಗಳನ್ನು, ನೀತಿವಂತ ಪ್ರಾಮಾಣಿಕ ರಾಜಕೀಯ ನಾಯಕರನ್ನು, ಆಹ್ವಾನಿಸಿ ಅವರಿಂದ ಉಪನ್ಯಾಸಗಳನ್ನು ಮಾಡಿಸುತ್ತಿದ್ದರು.

ಚಟಗಳಿಗೆ-ವ್ಯಸನಗಳಿಗೆ ದಾಸರಾದವರನ್ನು ಪರಿವರ್ತನೆ ಮಾಡುವುದರ ಜೊತೆಗೆ **ಮಕ್ಕಳು-ವಿದ್ಯಾರ್ಥಿಗಳು-ಯುವಜನಾಂಗ ಚಟಗಳಿಗೆ ಬಲಿಯಾಗದಂತೆ** ಎಚ್ಚರ ಮೂಡಿಸುವುದೂ ಪೂಜ್ಯರ ಉದ್ದೇಶವಾಗಿತ್ತು.

ಪೂಜ್ಯ ಮಹಾಂತ ಶಿವಯೋಗಿಗಳು ವ್ಯಸನಗಳ ಕುರಿತು ಆಳವಾಗಿ ಅಧ್ಯಯನ ಚಿಂತನ ಮಾಡಿರುವುದರ ಜೊತೆಗೆ ಲೌಕಿಕ ಜನರ ಬದುಕಿನ ಅನುಭವಗಳನ್ನು ಕೇಳಿ ತಿಳಿದವರಾಗಿದ್ದರು. ಅಂತೆಯೇ ದುರ್ವ್ಯಸನ–ದುಶ್ಚಟ–ದುರಾಚಾರಗಳಿಗೆ ಬಸವಾದಿ ಶರಣರ ವಚನಾನುಭಾವ ಹಾಗೂ ಸ್ವಾನುಭಾವದ ನೆಲೆಯಲ್ಲಿ ಪರಿಹಾರವನ್ನೂ ಸೂಚಿಸುತ್ತಿದ್ದರು. ಸಾಮಾನ್ಯವಾಗಿ ವ್ಯಸನಗಳು ೭ ಪ್ರಕಾರವಾಗಿರುತ್ತವೆಯೆಂದು ಚೆನ್ನಬಸವಣ್ಣನವರ 'ಕರಣ ಹಸಿಗೆ' ಗ್ರಂಥದಲ್ಲಿ ನೋಡುತ್ತೇವೆ.

೧) ತನುವ್ಯಸನ – ದೈಹಿಕ ಚಟಗಳು
೨) ಮನ ವ್ಯಸನ – ಪರಸ್ತ್ರೀ ವ್ಯಾಮೋಹ
೩) ಧನ ವ್ಯಸನ – ಪರಧನದಾಸೆ
೪) ರಾಜ್ಯ ವ್ಯಸನ – ವಾಹನ–ವಸ್ತ್ರಾಭರಣಗಳ ದುರಾಸೆ
೫) ವಿಶ್ವ ವ್ಯಸನ – ಮನೆ–ಹೊಲ ಆಸ್ತಿಗಳಿಸುವ ದುರಾಸೆ
೬) ಉತ್ಸಾಹ ವ್ಯಸನ – ಸತಿ–ಸುತರಿಗಾಗಿ ಅತೀಯಾದ ವ್ಯಾಮೋಹ
೭) ಸೇವಕ ವ್ಯಸನ – ಆಹಂಕಾರದಿಂದ ಸೇವಕರಂತೆ ವರ್ತಿಸುವಿಕೆ

ಈ ರೀತಿ ಮನುಷ್ಯ ಒಂದಿಲ್ಲೊಂದು ವ್ಯಸನಗಳಿಗೆ ಬಲಿಯಾಗಿ ಜೀವನ ಹಾಳುಮಾಡಿಕೊಳ್ಳುವನು. ಚಟಗಳು ಸಾಮಾನ್ಯವಾಗಿ ಎರಡು ಪ್ರಕಾರದ್ದೆಂದು ವರ್ಗೀಕರಿಸಲಾಗಿದೆ –

೧) ಬಹಿರಂಗ ಚಟಗಳು
೨) ಅಂತರಂಗ ಚಟಗಳು

೧) ಬಹಿರಂಗ ಚಟಗಳು :

- ತಂಬಾಕು, ಜರ್ದಾ, ಖೈನಿ, ಮಾವಾ ತಿನ್ನುವುದು, ಬೀಡಿ, ಚುಟ್ಟಾ, ಸಿಗರೇಟು, ಚಿಲುಮಿ, ಗುಡುಗುಡಿ, ಚಿರೂಟ್ ಪೈಪ್ ಸೇದುವುದು ಇದರಿಂದ ಪುಪ್ಪುಸ–ರಕ್ತ ಕ್ಯಾನ್ಸರನಿಂದ ಬಳಲುವನು.
- ಗಾಂಜಾ ಸೇದುವುದು, ಭಾಂಗ ಕುಡಿಯುವುದು, ಮಾಜೂನ್ ಮಿಠಾಯಿ ತಿನ್ನುವದು, ಆಶಿಸ್, ಚರಸ್ ಸೇವನೆ, ಸೇದುವ ಚಟ.
- ಅಫೀಮು ತಿನ್ನುವ, ಕುಡಿಯುವ, ಸೇದುವ ಚಟ.
- ಅಂಫೆಟ್ಯಾಮಿನ್ ಎಂಬ ಔಷಧ ಸೇವನೆ ಚಟ.
- ಖೈನಿ ಪಾನ ಮಸಾಲಾ, ಗುಟಖಾ ತಿನ್ನುವ ಚಟ.
- ಅತೀಯಾಗಿ ಅಡಿಕೆ ತಿನ್ನುವ, ತಿನ್ನುತ್ತಾ ಬೀಡಿ ಸಿಗರೇಟ ಸೇದುವ ಚಟ.
- ಮದ್ಯಪಾನ, ದಾರು, ಸೆರೆ, ಸಿಂಧಿ, ಬೀರ, ಬ್ರ್ಯಾಂಡಿ, ವೈನ್, ವ್ಹಿಸ್ಕಿ, ರಮ್‌ಸೇವನೆ,

ಮುಂತಾದವುಗಳಲ್ಲಿ ಇಥೈಲ ಅಲ್ಕೊಹಾಲ (Ethyl Alcohol) ಪ್ರತಿಶತ ೧೦ ರಿಂದ ೬೦ % ವರೆಗೆ ಇರುತ್ತದೆಯೆಂದು ವೈದ್ಯ ವಿಜ್ಞಾನಿಗಳು ಹೇಳುತ್ತಾರೆ.

ಇವೇ ಮುಂತಾದ ಬಹಿರಂಗದ ವ್ಯಸನ-ಚಟಗಳಿಂದ ಮಾನವನು-ಬಾಯಿ, ಗಂಟಲು, ಅನ್ನನಾಳ, ಜಠರ, ಯಕೃತ್ತು, ಪ್ಯಾನ್‌ಕ್ರಿಯಾಸ್, ಕರುಳು, ಮೂತ್ರಪಿಂಡ (ಕಿಡ್ನಿ), ಹೃದಯ ಪುಪ್ಪಸ, ಪುರುಷ, ಸ್ತ್ರೀ ಜನನೇಂದ್ರಿಯ, ಮೆದುಳು, ಗರ್ಭಸ್ಥ ಶಿಶು, ಭ್ರೂಣ, ಮುಂತಾದವುಗಳು ಕ್ಯಾನ್ಸರ್ ರೋಗ ಪೀಡಿತವಾಗುತ್ತವೆ.

ಮದ್ಯ ಸೇವನೆಯೊಂದಿಗೆ ಮಾಂಸಾಹಾರಕ್ಕೂ ಅಂಟಿಕೊಳ್ಳುವ ಮನುಷ್ಯ ಅಭಕ್ಷ್ಯ ಭಕ್ಷಣ, ಅಪೇಯ ಪೇಯದಿಂದಾಗಿ ಆರೋಗ್ಯ ಹಾಳು ಮಾಡಿಕೊಳ್ಳುವನು.

೨. ಅಂತರಂಗದ ಚಟಗಳು :

- ಪರಸ್ತ್ರೀ ಗಮನ, ವೇಶ್ಯೆಯರ ಸಹವಾಸ, ದೇವದಾಸಿ ಬಸವಿಯರ ಸಹವಾಸ, ಸಲಿಂಗ ಕಾಮ ಮುಂತಾದವು ;
- ಪರಧನದಾಮಿಷ, ಲಂಚ-ವಂಚನೆ, ಭ್ರಷ್ಟಾಚಾರದಿಂದ ಹಣಗಳಿಸುವಿಕೆ ಸಂಬಳದ ಹೊರತಾಗಿ ಗಿಂಬಳಕ್ಕೆ ಕೈಚಾಚುವುದು, ದುರ್ಮಾರ್ಗದಿಂದ ಧನಾರ್ಜನೆ, ೧೦% ರಿಂದ ೪೦% ಪರ್ಸೆಂಟೇಜ್‌ವರೆಗೆ ಗೌಪ್ಯವಾಗಿ ಹಣ ಸ್ವೀಕರಿಸುವಿಕೆ.
- ರಾಗ-ದ್ವೇಷ, ಮದ-ಮತ್ಸರ, ಅಸೂಯೆ-ಹೊಟ್ಟೆ ಕಿಚ್ಚು ಪಡುವುದು.
- ಚಾಡಿ-ಚುಗಲಿ ಹೇಳುವುದು, ಪರರ ನಿಂದೆ ಆಡುವುದು.
- ಕಳವು, ಸುಲಿಗೆ, ದರೋಡೆ, ಮೋಸ ಮಡುವುದು.
- ವಿವಾಹಪೂರ್ವದ ಲೈಂಗಿಕ ಸಂಬಂಧಗಳು, ಪರಸತಿ-ಪರಪತಿಯರೊಡನೆ ಸಂಬಂಧವಿಟ್ಟುಕೊಳ್ಳುವುದು.

ಇವೇ ಮುಂತಾದವು ಅಂತರಂಗದ ಹೇಳಿಕೊಳ್ಳಲಾಗದ ಚಟಗಳಾಗಿವೆ. ಇನ್ನು,

ಕೌಟುಂಬಿಕವಾಗಿ - ತಂದೆ-ಮಕ್ಕಳ, ಅಣ್ಣ-ತಮ್ಮಂದಿರ, ಅತ್ತೆ-ಸೊಸೆಯರ ಜಗಳಗಳು;

ಧಾರ್ಮಿಕವಾಗಿ - ದೇವರು, ಪೂಜೆ, ಅಭಿಷೇಕ, ವ್ರತ, ನೇಮಗಳ ಹೆಸರಿನಲ್ಲಿ ಅಜ್ಞ-ಮುಗ್ಧ ಜನರನ್ನು ಶೋಷಣೆ ಮಾಡುವ ಚಟಗಳು;

ರಾಜಕೀಯವಾಗಿ - ರಾಜಕಾರಣಿಗಳು ಸುಳ್ಳು ಆಶ್ವಾಸನೆಗಳನ್ನು ನೀಡಿ, ಮೋಸ ಗೊಳಿಸುವುದು, ರಾಷ್ಟ್ರದ ಸಂಪತ್ತನ್ನು ದುರುಪಯೋಗಪಡಿಸಿಕೊಳ್ಳುವುದು, ಭ್ರಷ್ಟಾಚಾರ;

ಸಾಮಾಜಿಕವಾಗಿ - ಮೇಲು-ಕೀಳು, ಸ್ಪೃಶ್ಯ-ಅಸ್ಪೃಶ್ಯ ಎಂಬ ಜಾತಿ ಭೇದ-ಭಾವ ಮಾಡುವುದು-ಸಾಮಾಜಿಕ ಅನ್ಯಾಯಗಳು, ಊರ ಹಿರಿಯರ ವ್ಯಾಜ್ಯಗಳು; ಮಟಕಾ, ಓಸಿ, ಇಸ್ಪೇಟು, ಜೂಜು, ಪಾರ್ಟಿ ಮಾಡುವುದು, ಇತ್ಯಾದಿ ಹಾಗೂ ವರದಕ್ಷಿಣೆ, ಮರ್ಯಾದಾ ಹತ್ಯೆ, ವಿವಾಹ ವಿಚ್ಛೇದನೆಗಳಂತಹ ಅನಿಷ್ಟಗಳು;

ಶೈಕ್ಷಣಿಕವಾಗಿ – ಶಿಕ್ಷಕರು ಸರಿಯಾಗಿ ಪಾಠ ಬೋಧನೆ ಮಾಡದಿರುವುದು, ಆತ್ಮಹತ್ಯೆ, ವಿದ್ಯಾರ್ಥಿಗಳು ಶಾಲೆ ತಪ್ಪಿಸಿ ತಿರುಗುವುದು. ಪರೀಕ್ಷೆಯಲ್ಲಿ ನಕಲು ಮಾಡುವುದು, ಹಣದ ದುರಾಸೆಗಾಗಿ ಪ್ರಶ್ನೆ ಪತ್ರಿಕೆ ಬಹಿರಂಗಗೊಳಿಸುವುದು, ಅರ್ಹತೆಯಿಲ್ಲದವರಿಗೆ ಜಾತಿ ಪ್ರಮಾಣಪತ್ರ ನೀಡಿ ಮೋಸದಿಂದ ಹುದ್ದೆಗಿಟ್ಟಿಸಿಕೊಳ್ಳುವುದು.

ವ್ಯಾಪಾರಸ್ಥರು – ಉದ್ದಿಮೆದಾರರು – ಗ್ರಾಹಕರಿಗೆ ಕಲಬೆರಿಕೆಯ ದವಸ–ಧಾನ್ಯ ನೀಡುವುದು, ಕೃತ್ರಿಮ ವಸ್ತುಗಳನ್ನು ತಯಾರಿಸಿ–ಶುದ್ಧವೆಂದು ಮೋಸದಿಂದ ಮಾರುವುದು.

ಒಟ್ಟಿನಲ್ಲಿ ದೇಶದ ಎಲ್ಲ ರಂಗಗಳಲ್ಲಿಯ ಅನಿಷ್ಠ (Evils) ಗಳನ್ನು 'ಮಹಾಂತ ಜೋಳಿಗೆ'ಗೆ ಪೂಜ್ಯ ಮಹಾಂತ ಶಿವಯೋಗಿಗಳು ಸ್ವೀಕರಿಸಿ, ದುರ್ವ್ಯಸನಿ, ದುರಾಚಾರಿ, ದುರ್ಮಾಗಿಗಳನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿದ್ದಾರೆ. ಈ ಕಾರ್ಯವನ್ನು ಈಗ ಪೂಜ್ಯ ಗುರುಮಹಾಂತಸ್ವಾಮಿಗಳು ಮುಂದುವರೆಸಿದ್ದಾರೆ.

೧೯೭೫ ರಿಂದ ಮಹಾಂತ ಜೋಳಿಗೆ ಸಂಚರಿಸಿದ ವಿವರ :

೧೯೭೫ – ಹುನಗುಂದ, ಇಳಕಲ್ಲ. ಸುತ್ತು ಮುತ್ತಲಿನ ೬೫ ಗ್ರಾಮಗಳು

೧೯೭೬ – ರಾಯಚೂರು ನಗರ ಹಾಗೂ ವಿವಿಧ ಬಡಾವಣೆಗಳು

೧೯೭೭ – ದೇವದುರ್ಗ, ಮಾನ್ವಿ ತಾಲೂಕು ಗ್ರಾಮಗಳು

೧೯೭೮ – ಕುಷ್ಟಗಿ, ಲಿಂಗಸಗೂರು ತಾಲೂಕಿನ ಗ್ರಾಮಗಳು

೧೯೭೯ – ಧಾರವಾಡ ಜಿಲ್ಲೆಯ ಸವಣೂರು, ಗದಗ ತಾಲೂಕಿನ ಗ್ರಾಮಗಳು

೧೯೮೦ – ಗುಳೇದಗುಡ್ಡ, ಬಾದಾಮಿ ತಾಲೂಕಿನ ಗ್ರಾಮಗಳು

೧೯೮೧ – ಅಮರಾವತಿ ಸುತ್ತಲಿನ ಗ್ರಾಮಗಳು

೧೯೮೨ – ಶಿವಯೋಗ ಮಂದಿರ, ಮಹಾಕೂಟ ಬಾದಾಮಿ ತಾಲೂಕು.

೧೯೮೩ – ಆಂಧ್ರ ಪ್ರದೇಶದ ಆದವಾನಿ, ಹಾಲ್ವಿ ಭಾಗದ ಗ್ರಾಮಗಳು.

೧೯೮೪ – ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಗ್ರಾಮಗಳು.

೧೯೮೫ – ಬೀದರ, ಭಾಲ್ಕಿ, ಹುಮನಾಬಾದ, ಬಸವಕಲ್ಯಾಣ, ಔರಾದ, ಹುಲಸೂರು ಭಾಗದ ಗ್ರಾಮಗಳು.
ತುಮಕೂರು ತಾಲೂಕಿನ ಸಿದ್ಧಗಂಗಾ ಸುತ್ತಲ ಗ್ರಾಮಗಳು

೧೯೮೬ – ದಾವಣಗೆರೆ ನಗರದ ವಿವಿಧ ಬಡಾವಣೆಗಳು.

೧೯೮೭ – ಧಾರವಾಡನಗರ, ವಿವಿಧ ಬಡಾವಣೆಗಳು ಹಾಗೂ ಇಳಕಲ್ಲ ಸುತ್ತಲಿನ ಗ್ರಾಮಗಳು

೧೯೮೮ – ಹುಕ್ಕೇರಿ, ಸಂಕೇಶ್ವರ ಭಾಗದ ಗ್ರಾಮಗಳು

– ಕಲಬುರ್ಗಿ ನಗರದ ವಿವಿಧ ಬಡಾವಣೆಗಳು
– ಅಥಣಿ ತಾಲೂಕಿನ ಸವದಿ, ಸತ್ತಿ ಸುತ್ತಲಿನ ಹಳ್ಳಿಗಳು

೧೯೮೯ – ಹುಮನಾಬಾದ ತಾಲೂಕು, ಹಳ್ಳಿಖೇಡ(ಬಿ) ಸುತ್ತಲಿನ ಗ್ರಾಮಗಳು
– ಅಥಣಿ ತಾಲೂಕಿನ ಗ್ರಾಮಗಳು.

೧೯೯೦ – ಇಂಗ್ಲಂಡ್, ಸ್ಕಾಟಲ್ಯಾಂಡ್, ವೇಲ್ಸ್, ಐರ್‌ಲ್ಯಾಂಡ್, ಆ್ಯಂಗಲ್ ಸೀ ನಡುಗಡ್ಡೆಗಳು, ಯುರೋಪ ಖಂಡದಲ್ಲಿ ಸಂಚಾರ.
– ಕಲಬುರ್ಗಿ ಜಿಲ್ಲೆಯ ಚಿಂಚೋಳಿ ಹಾಗೂ ಸುತ್ತಲಿನ ಗ್ರಾಮಗಳು
– ಹರಿಹರ ತಾಲೂಕಿನ ಕುಂಬಳೂರು, ಮಲೆಬೆನ್ನೂರ ಹಾಗೂ ಗ್ರಾಮಗಳು
– ವಿಜಾಪುರ ಜಿಲ್ಲೆ ಸಿಂದಗಿ ತಾಲೂಕಿನ ಚಾಂದಕವಠೆ ಗ್ರಾಮ
– ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಕಾಪನಹಳ್ಳಿ ಹಾಗೂ ಸುತ್ತಲ ಗ್ರಾಮಗಳು

೧೯೯೧ – ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕನಕಪುರ, ಮರಳೆಗವಿಮಠ ಹಾಗೂ ಸುತ್ತಲಿನ ಗ್ರಾಮಗಳು

೧೯೯೨ – ಸವದತ್ತಿ ತಾ. ಯರಗಟ್ಟಿ ಹಾಗೂ ಸುತ್ತಮುತ್ತಲಿನ ಗ್ರಾಮಗಳು

೧೯೯೩ – ಬಾಗಲಕೋಟೆ ಮಲ್ಲಾಪುರ ಸುತ್ತಲಿನ ಗ್ರಾಮಗಳು.
– ಬಸವಕಲ್ಯಾಣ ತಾಲೂಕಿನ ಮಂಟಾಳ, ಪರ್ತಾಪೂರ ಸುತ್ತಲಿನ ಗ್ರಾಮಗಳು

೧೯೯೪ – ಬೀದರ ನಗರ, ವಿವಿಧ ಬಡಾವಣೆಗಳು.
– ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ಸುತ್ತಲಿನ ಗ್ರಾಮಗಳು
– ಆಂಧ್ರ ಪ್ರದೇಶದ ಮೇಥಕ, ಜಹಿರಾಬಾದ ಸುತ್ತಲಿನ ಗ್ರಾಮಗಳು.

೧೯೯೫ – ಮಹಾರಾಷ್ಟ್ರ ರಾಜ್ಯದ ಲಾತೂರ, ಉದಗೀರ ಸುತ್ತಲಿನ ಗ್ರಾಮಗಳು.
– ಚಿತ್ತರಗಿ ಹಾಗೂ ಸುತ್ತಲಿನ ಗ್ರಾಮಗಳು
– ೪೦ ದಿನ ಮೈಸೂರದಿಂದ ಬಸವಕಲ್ಯಾಣದವರೆಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಬಸವ ಸಂದೇಶ ಯಾತ್ರೆ, ಮಹಾಂತಜೋಳಿಗೆ ಸಂಚಾರ.

೧೯೯೬ – ಹುಬ್ಬಳ್ಳಿ ಮಹಾನಗರದ ವಿವಿಧ ಬಡಾವಣೆಗಳು
– ಹುನಗುಂದ ತಾಲೂಕಿನ ಗ್ರಾಮಗಳು.
– ಬಾಗಲಕೋಟೆ ತಾಲೂಕಿನ ಗ್ರಾಮಗಳು.
– ಬಸವಕಲ್ಯಾಣ ತಾಲೂಕಿನ ಹುಲಸೂರು ಸುತ್ತಲಿನ ಗ್ರಾಮಗಳು

೧೯೯೭ – ದಾವಣಗೆರೆ ನಗರದ ಬಡಾವಣೆಗಳು

೧೯೯೮ – ತುಮಕೂರ ನಗರ ಹಾಗೂ ವಿವಿಧ ಬಡಾವಣೆಗಳು.

೧೯೯೯ – ಹೊಸದಿಲ್ಲಿ ವಿವಿಧ ಬಡಾವಣೆಗಳು.

– ಕಲಬುರಗಿ, ಮಹಾಗಾಂವ, ಕಮಲಾಪುರ.
– ದಾವಣಗೆರೆ ನಗರ ಸುತ್ತಲ ಗ್ರಾಮಗಳು
೨೦೦೦ – ದಾವಣಗೆರೆ ತಾಲೂಕಿನ ಗ್ರಾಮಗಳು
– ಕಲಬುರ್ಗಿ ಜಿಲ್ಲೆಯ ಜೇವರಗಿ, ಕಲ್ಲೂರ(ಕೆ) ಗ್ರಾಮಗಳು
೨೦೦೧ – ಅಥಣಿ, ಮಲಾಬಾದ, ಸುತ್ತಲಿನ ಗ್ರಾಮಗಳು
೨೦೦೨ – ಮಹಾರಾಷ್ಟ್ರದ ಸೋಲಾಪುರ, ಅಕ್ಕಲಕೋಟೆ ಸುತ್ತಲಿನ ಗ್ರಾಮಗಳು
– ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು, ಸಿದ್ದಯ್ಯನಕೋಟೆ ಭಾಗದ ಗ್ರಾಮಗಳು.
– ಚಿತ್ತರಗಿ ಮೂಲಪೀಠದ ಸುತ್ತಮುತ್ತಲಿನ ಗ್ರಾಮಗಳು
೨೦೦೩ – ಹೊಸದಿಲ್ಲಿಯಲ್ಲಿ ಜಾಟವ ಜನಾಂಗದವರ ಸಮಾವೇಶದಲ್ಲಿ
– ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು, ಜಗಳೂರು ತಾಲೂಕಿನ ಗ್ರಾಮಗಳು
೨೦೦೪ – ಬೆಳಗಾವಿ ಜಿಲ್ಲೆ ಅಥಣಿ ತಾಲೂಕಿನ ಮಲಾಬಾದ ಸುತ್ತಲ ಗ್ರಾಮಗಳು
೨೦೦೫ – ಬೀದರ ಜಿಲ್ಲೆ ಬಸವಕಲ್ಯಾಣ ತಾಲೂಕಿನ ಗ್ರಾಮಗಳಲ್ಲಿ
೨೦೦೬ – ತಮಿಳನಾಡು ರಾಜ್ಯದ –ಭವಾನಿ, ಕೊಯಮತ್ತೂರು.
೨೦೦೭ – ಜಮಖಂಡಿ ಹಾಗೂ ಸುತ್ತಲಿನ ಗ್ರಾಮಗಳು
೨೦೦೮ – ಗದಗ ನಗರದ ವಿವಿಧ ಬಡಾವಣೆಗಳು
೨೦೦೯ – ಬಸವಕಲ್ಯಾಣ, ಬೇಲೂರು, ಬೆಟ್ಟದ ಬಾಲಕಂದ, ಪರ್ತಾಪುರ.
೨೦೧೦ – ರಾಯಚೂರ ಜಿಲ್ಲೆಯ ಲಿಂಗಸಗೂರು, ಕರಡಕಲ್ಲ ಗ್ರಾಮಗಳಲ್ಲಿ
– ಮೊಳಕಾಲ್ಮೂರು ತಾಲೂಕಿನ ಸಿದ್ಧಯ್ಯನಕೋಟೆ, ಸುತ್ತಲಿನ ಗ್ರಾಮಗಳು
೨೦೧೧ – ಧಾರವಾಡ ಜಿಲ್ಲೆಯ ಮನಗುಂಡಿ ಹಾಗೂ ಗ್ರಾಮಗಳು
– ಇಳಕಲ್ಲ ಸುತ್ತಲ ಗ್ರಾಮಗಳು, ಅಥಣಿ, ಸವದಿ ಗ್ರಾಮಗಳಲ್ಲಿ
೨೦೧೨ – ಬೆಂಗಳೂರು ನಗರದ ಕೆಲವು ಬಡಾವಣೆಗಳಲ್ಲಿ, ಬಾಗಲಕೋಟೆಯಲ್ಲಿ
೨೦೧೩ – ಹುಬ್ಬಳ್ಳಿ–ಶಿರಗುಪ್ಪಿ ಭಾಗದಲ್ಲಿ, ಗುಳೇದಗುಡ್ಡದಲ್ಲಿ
೨೦೧೪ – ಕುಂದಗೋಳ ತಾಲೂಕಿನಲ್ಲಿ ಹಾಗೂ ಬಾಗಲಕೋಟೆ ತಾಲೂಕಿನಲ್ಲಿ
೨೦೧೫ – ರಾಣಿಬೆನ್ನೂರಲ್ಲಿ, ಸಿದ್ಧಯ್ಯನಕೋಟೆ ಗ್ರಾಮದಲ್ಲಿ
೨೦೧೬ – ಇಳಕಲ್ಲ–ಹಿರೇಸಿಂಗನಗುತ್ತಿ, ಹುನಗುಂದ ಬಡಾವಣೆಗಳಲ್ಲಿ
೨೦೧೭ – ಹಿರೇಬಾದವಾಡಗಿ, ಹುನಗುಂದ, ತಾಲೂಕಿನ ಗ್ರಾಮಗಳು.
೨೦೧೮ – ಬೆಳಗಾವಿ ಕೆ.ಎಲ್.ಇ. ಸಂಸ್ಥೆಯಲ್ಲಿ (ಇದು ಡಾ. ಮಹಾಂತ ಶಿವಯೋಗಿಗಳ ಅಂತಿಮ ಕಾರ್ಯಕ್ರಮ)

ಈಗ ೨೦೧೯ ರಿಂದ ಪೂಜ್ಯ ಗುರುಮಹಾಂತ ಸ್ವಾಮಿಗಳವರಿಂದ

ಮಹಾಂತ ಜೋಳಿಗೆ ಕಾರ್ಯಗಳು ಮುಂದುವರೆದುದು......

೨೦೧೯ – ಬಾಗಲಕೋಟೆ ಜಿಲ್ಲೆಯ ಇಳಕಲ್ಲ ಪಟ್ಟಣದ ವಿವಿಧ ಬಡಾವಣೆಗಳು.

೨೦೨೦ – ಬೆಳಗಾವಿ ಜಿಲ್ಲೆಯ ಸವದಿ ಗ್ರಾಮ ಹಾಗೂ ಸುತ್ತಲಿನ ಗ್ರಾಮಗಳು.

೨೦೨೧ – ಚಿತ್ರದುರ್ಗ ಜಿಲ್ಲೆಯ ಸಿದ್ಧಯ್ಯನಕೋಟೆ ಸುತ್ತಲಿನ ಗ್ರಾಮಗಳು

೨೦೨೨ – ಅಥಣಿ ತಾಲೂಕಿನ ಸವದಿ ಗ್ರಾಮದ ವಿವಿಧ ತೋಟದ ಮನೆಗಳಲ್ಲಿ

– ಶಿವಮೊಗ್ಗ ಜಿಲ್ಲೆಯ ಸಂತೆಕಡೂರ ಗ್ರಾಮದಲ್ಲಿ

ಪರಮಪೂಜ್ಯ ಡಾ. ಮಹಾಂತ ಶಿವಯೋಗಿಗಳು ದಿನಾಂಕ ೧೯–೫–೨೦೧೮ ರಂದು ಲಿಂಗೈಕ್ಯರಾದ ನಂತರ, **ಪೂಜ್ಯ ಶ್ರೀ ಮ.ನಿ.ಪ್ರ. ಗುರುಮಹಾಂತ ಸ್ವಾಮಿಗಳು** ೨೦೧೮ ರಿಂದ ೨೦೨೨... ವರೆಗೆ 'ಮಹಾಂತ ಜೋಳಿಗೆಯ– ವ್ಯಸನಮುಕ್ತಿ ಆಂದೋಲನ ಯಾತ್ರೆಯನ್ನು ನಿರಂತರವಾಗಿ ಮುಂದುವರೆಸಿಕೊಂಡು ಮುನ್ನಡೆದಿದ್ದಾರೆ. ಇವರಿಗೂ ಕೂಡ **ಕರ್ನಾಟಕ ಸರಕಾರದ** ಮದ್ಯಪಾನ ಸಂಯಮ ಮಂಡಳಿಯ ೨೦೨೦ನೇ ಸಾಲಿನ **'ಸಂಯಮ ಪ್ರಶಸ್ತಿ'** ಲಭಿಸಿದೆ.

ಮಹಾಂತ ಜೋಳಿಗೆಗೆ ದುರ್ವ್ಯಸನ–ದುರಾಚಾರಗಳನ್ನು ಭಿಕ್ಷೆ ನೀಡಿ ಪರಿವರ್ತನೆಯಾದವರ ಕೆಲವು ಉದಾಹರಣೆಗಳು ಇಂತಿವೆ :

೧. ಹುನಗುಂದದಲ್ಲಿ ಶಿವಶರಣರ ಮಾದಾರಚೆನ್ನಯ್ಯನ ಕೇರಿಯಲ್ಲಿ ಪೂಜ್ಯ ಮಹಾಂತ ಸ್ವಾಮಿಗಳು ಮಹಾಂತಜೋಳಿಗೆ ಕಾರ್ಯಕ್ರಮ ಹಾಕಿಕೊಂಡು ಬಂದಾಗ– ಅಲ್ಲಿಯ ಒಬ್ಬ 'ಮದ್ಯಪಾನ' ವ್ಯಸನಿಯು ಪೂಜ್ಯರ ಅಂತಃಕರಣದ ಉಪದೇಶ ಆಲಿಸಿ ಸ್ವಯಂಪ್ರೇರಣೆಯಿಂದ ಗುಡಿಸಲೊಳಗೆ ಹೋಗಿ 'ಸರಾಯಿ ಬಾಟಲಿ' ತಂದು ಜೋಳಿಗೆಗೆ ಹಾಕಿದ್ದಲ್ಲದೇ ತನ್ನ ಸಂಗಡಿಗರನ್ನೂ ಪ್ರೇರಣೆ ನೀಡಿ–ಅವರೂ ವ್ಯಸನಮುಕ್ತರಾಗುವಂತೆ ಮಾಡಿದನು.

೨. ಕುಷ್ಟಗಿ ತಾಲೂಕಿನ ತಾವರಗೇರಾ ಗ್ರಾಮದಲ್ಲಿಯ 'ಓಸಿ' ಏಜೆಂಟರೊಬ್ಬರು ಪೂಜ್ಯ ಮಹಾಂತಸ್ವಾಮಿಗಳ ಕಳಕಳಿಯ ಮಾತುಗಳಿಂದ ಪರಿವರ್ತಿತನಾಗಿ ತನ್ನ 'ಓಸಿ' ಏಜೆನ್ಸಿ ವೃತ್ತಿಯನ್ನೇ ಜೋಳಿಗೆಗೆ ಹಾಕಿದ್ದು, ಇಡೀ ಪಟ್ಟಣವು 'ಓಸಿ'ಯಿಂದ ಮುಕ್ತವಾದುದು ಹೃದಯಸ್ಪರ್ಶಿ ಸನ್ನಿವೇಶವಾಯಿತು.

೩. ರಾಯಚೂರ ಜಿಲ್ಲೆಯ ಕಂದಕೂರ ಗ್ರಾಮದಲ್ಲಿ ಒಡಹುಟ್ಟಿದ ಅಣ್ಣ – ತಮ್ಮಂದಿರು ಇಪ್ಪತ್ತು ವರುಷಗಳಿಂದ ವೈರತ್ವ – ದ್ವೇಷ ಬೆಳೆಸಿಕೊಂಡು ಕೋರ್ಟು – ಕಛೇರಿ ಮೆಟ್ಟಿಲು ಏರಿ ಬಹಳಷ್ಟು ಆಸ್ತಿ – ಪಾಸ್ತಿ ನಷ್ಟ ಮಾಡಿಕೊಂಡಿದ್ದರು. ಪೂಜ್ಯ ಮಹಾಂತಸ್ವಾಮಿಗಳ ಜೋಳಿಗೆ ಕಾರ್ಯಕ್ರಮದಲ್ಲಿ ಬಂದು ಕುಳಿತವರು ಪೂಜ್ಯರ ಹಿತನುಡಿ ಆಲಿಸಿ, ಮನಃಪರಿವರ್ತನೆಗೊಂಡು ತಮ್ಮ ದ್ವೇಷ– ವೈರತ್ವ ಜೋಳಿಗೆಗೆ ಹಾಕಿದ್ದಲ್ಲದೇ, ಅಣ್ಣ – ತಮ್ಮಂದಿರು ಪರಸ್ಪರರು ಆಲಿಂಗಿಸಿಕೊಂಡು, ಪೂಜ್ಯರ

ಪಾದಗಳಿಗೆ ಶರಣೆಂದು ಪ್ರೀತಿಯಿಂದ ಒಂದಾದ ಘಟನೆ ಇಡೀ ಗ್ರಾಮದ ಜನರಲ್ಲಿ ಸಂತೋಷವನ್ನುಂಟು ಮಾಡಿತು.

೪. ರಾಮದುರ್ಗ ತಾಲೂಕಿನಲ್ಲಿ ಒಬ್ಬ ಶಿಕ್ಷಕರು ಅತಿಯಾಗಿ ಸೆರೆ ಕುಡಿದು ಎಲ್ಲೆಂದರಲ್ಲಿ ರಸ್ತೆಯಲ್ಲಿ ಪ್ರಜ್ಞೆಯಿಲ್ಲದೇ ಬಿದ್ದಿರುತ್ತಿದ್ದರು. ಅವರ ವಿದ್ಯಾರ್ಥಿಗಳು ತಮ್ಮ ಗುರುಗಳು ಈ ಚಟದಿಂದ ಮುಕ್ತರಾಗಬೇಕೆಂಬ ಕಳಕಳಿಯಿಂದ ಪೂಜ್ಯ ಮಹಾಂತಸ್ವಾಮಿಗಳಲ್ಲಿ ಕೇಳಿಕೊಂಡು ಪೂಜ್ಯರನ್ನೇ ತಮ್ಮ ಗುರುಗಳ ಮನೆಗೆ ಕರೆದೊಯ್ದು – ಬುದ್ಧಿ ಹೇಳಿಸಿದರು. ತಮ್ಮ ವಿದ್ಯಾರ್ಥಿಗಳ ಭಕ್ತಿ – ಪ್ರೇಮವನ್ನು ಕಂಡ ಆ ಮದ್ಯಪಾನ ವ್ಯಸನಿ ಶಿಕ್ಷಕರು ಪೂಜ್ಯರ ಜೋಳಿಗೆಗೆ ಮದ್ಯಪಾನದ ವ್ಯಸನ ಹಾಕಿದ ಪ್ರಸಂಗ ಆ ಮನೆತನದ ತಾಯಂದಿರು –ಬಂಧುಗಳಲ್ಲಿ ಆನಂದಾಶ್ರು ಉಂಟಾಗುವಂತೆ ಮಾಡಿತು.

೫. ಬೆಳಗಾವಿ ಜಿಲ್ಲೆಯ ಕೆಲವು ಗ್ರಾಮಗಳ ಪರಿಶಿಷ್ಟ ಜಾತಿಯ ಕೇರಿಗಳಲ್ಲಿ ಅನೇಕ ದೇವದಾಸಿ ತಾಯಂದಿರು ದೇವದಾಸಿ ಪದ್ಧತಿಯನ್ನು ಮಹಾಂತಜೋಳಿಗೆಗೆ ಹಾಕಿದ್ದಲ್ಲದೇ, ತಮ್ಮ ಹೆಣ್ಣು ಮಕ್ಕಳಿಗೆ ದೇವದಾಸಿಯರನ್ನಾಗಿ ಮಾಡುವುದಿಲ್ಲವೆಂದು ಪೂಜ್ಯರಿಗೆ ಮಾತುಕೊಟ್ಟು ಪೂಜ್ಯರ ಆಶೀರ್ವಾದ ಪಡೆದುದು, ಕೇರಿಯ ವಿದ್ಯಾವಂತ ಯುವಕರೆಲ್ಲ ಪೂಜ್ಯರ ಈ ವ್ಯಸನಮುಕ್ತ ಆಂದೋಲನಕ್ಕೆ ಬೆಂಬಲವಿತ್ತರು.

೬. ರಾಯಚೂರು ಜಿಲ್ಲೆಯ ಲಿಂಗಸಗೂರು–ಭಾವಣಿಯಲ್ಲಿ ಒಬ್ಬ ಅಗರ್ಭ ಶ್ರೀಮಂತ ಭಕ್ತನು ದುಶ್ಚಟಗಳ ಕಾಡಿನಲ್ಲಿ ಕಳೆದು ಹೋಗಿದ್ದ. ಯಾರು ಎಷ್ಟೇ ತಿಳುವಳಿಕೆ ಹೇಳಿದ್ದರೂ ತನ್ನ ಚಟಗಳನ್ನು ಬಿಟ್ಟಿರಲಿಲ್ಲ. ಹತ್ತಾರು ಜನ ಇವರ ದುರ್ವ್ಯಸನಿ –ದುಶ್ಚಟದ ಗೆಳೆಯರ ಗುಂಪು ಸಂಪೂರ್ಣ ಚಟಾಧೀನರಾಗಿದ್ದರು. ಆ ಊರಿನಲ್ಲಿ ಮಹಾಂತ ಜೋಳಿಗೆ ಕಾರ್ಯಕ್ರಮ ನಡೆದಾಗ, ನೂರಾರು ಜನರ ಗುಂಪಿನಲ್ಲಿ ಕುಳಿತು ಪೂಜ್ಯರ ಮಾತೃ ಹೃದಯದ ಕಳಕಳಿಯ ನುಡಿ – ವಚನ ಕೇಳಿದರು.

> ಮದ್ಯಪಾನವ ಮಾಡಿ ಇದ್ದುದೆಲ್ಲವ ನೀಡಿ
> ಬಿದ್ದು ಬರುವವನ ಸದ್ದಡಗಿ । ಸಂತಾನ
> ವೆದ್ದು ಹೋಗುವುದು ಸರ್ವಜ್ಞ॥

ಈ ವಚನ ಸಂದೇಶ ಹೇಳುತ್ತಾ ಪೂಜ್ಯರು ಮದ್ಯಪಾನಾದಿ ವ್ಯಸನಗಳ ದುಷ್ಪರಿಣಾಮಗಳನ್ನು ಸರ್ವರ ಮನಂಬುಗುವಂತೆ ಹೇಳಿ, ಕೈಮುಗಿದು ಮಹಾಂತ ಜೋಳಿಗೆಗೆ ಭಿಕ್ಷೆ ನೀಡಲು ಕೇಳಿಕೊಂಡರು. ಒಬ್ಬರಲ್ಲ, ಇಬ್ಬರಲ್ಲ, ನೂರಾರು ಜನ ಹಲವಾರು ಬಗೆಯ ಚಟಗಳಿಗೆ ಬಲಿಯಾಗಿ ತನು – ಮನ – ಧನ – ಕನಕ – ಆಸ್ತಿ ಹಾಳು ಮಾಡಿಕೊಂಡವರು ಸ್ವಯಂ ಪ್ರೇರಣೆಯಿಂದ ಎದ್ದು ಬಂದು ಜೋಳಿಗೆಗೆ ಚಟಗಳನ್ನು ಅರ್ಪಿಸಿ, ಇನ್ನೆಂದೂ ಚಟಗಳಿಗೆ ಒಳಗಾಗುವದಿಲ್ಲವೆಂದು ಪೂಜ್ಯರಿಗೆ ಮಾತುಕೊಟ್ಟು ಆಶೀರ್ವಾದ ಪಡೆದರು. ಇದನ್ನು ಕಣ್ಣಾರೆ ಕಂಡ ಆ ಶ್ರೀಮಂತ ಸಾಹುಕಾರರು ಎದ್ದು ಬಂದು ಪೂಜ್ಯರ ಪಾದಕ್ಕೆ ಶರಣೆಂದು ತಮ್ಮ ಎಲ್ಲಾ ದುಶ್ಚಟಗಳನ್ನು

ನೀಡಿದರು. ತಮ್ಮ ಗೆಳೆಯರನ್ನೂ ಪ್ರೇರೇಪಿಸಿ ಸನ್ಮಾರ್ಗಕ್ಕೆ ಹಚ್ಚಿದರು. ಅವರು ಸ್ವತಃ ಶರಣಸಾಹಿತಿಯಾಗಿ ಆಧುನಿಕ ವಚನಗಳನ್ನೇ ಬರೆದರು.

ಅರ್ಧಕ್ಕಿಂತ ಹೆಚ್ಚು ಆಯುಷ್ಯ ದುಶ್ಚಟಗಳ ಸಂಗದಲ್ಲಿ ಕಳೆದೆನಯ್ಯಾ
ಮಹಾಂತ ಜೋಳಿಗೆಯೇ ನನ್ನ ದುಶ್ಚಟ ಕಳೆಯಿತಯ್ಯಾ
ಮಹಾಂತ ಜೋಳಿಗೆಯೇ ನನಗೆ ಸದ್ಗುಣವ ನೀಡಿತಯ್ಯಾ
ಈ ಜೋಳಿಗೆಯ ಶಿವಶಿಲ್ಪಿಯ ಉಪದೇಶದಿಂದಲೇ ಬದುಕಿದೆನಯ್ಯಾ
ಈ ಜೋಳಿಗೆಯ ಶಿವಶಿಲ್ಪಿಯೇ ನನಗೆ ಪ್ರಾಣ
ಗತಿ–ಮತಿ ಸರ್ವಸ್ವವಯ್ಯಾ
ಚಿತ್ತರಗಿ ಪೀಠದೊಡೆಯ ಶ್ರೀ ಮಹಾಂತೇಶ.

ಇದು ದುಶ್ಚಟಗಳ ಕಾಡಿನಲ್ಲಿ ಕಳೆದುಹೋಗಿದ್ದ ಮರೆವಿನ ಮಾನವ, ಅರಿವಿನ ಶರಣನಾಗಿ ನಾಡಿನ ಶ್ರೇಷ್ಠ ಆಧುನಿಕ ವಚನಕಾರರಲೊಬ್ಬರಾಗಿ, ನೂರಾರು ಜನರಿಗೆ ಸ್ವಾನುಭಾವದ ಮೂಲಕ ಚಟ ಬಿಡಿಸುವ ಸಾಹಿತಿಗಳಾಗಿ ಪರಿವರ್ತನೆಗೊಂಡದ್ದು ಪವಾಡ ಸದೃಶ ಘಟನೆಯೇ ಸರಿ !

೨. ಬೀದರ ಜಿಲ್ಲೆಯ ಬಸವಕಲ್ಯಾಣದ ಒಬ್ಬ ಶ್ರೀಮಂತ ಹತ್ತಾರು ಲಾರಿಗಳ ಯಜಮಾನ, ನೂರಾರು ಎಕರೆ ಭೂಮಿಯ ಧಣಿ, ಸತಿ – ಸುತರ ಸುಂದರ ಕುಟುಂಬದ ಸದ್ಗೃಹಸ್ಥನೊಬ್ಬ ಗೆಳೆಯರ ಸಹವಾಸದಿಂದ ಜೂಜು, ದುಶ್ಚಟಗಳಿಗೆ ಬಲಿಯಾಗಿ ಎಲ್ಲವನ್ನೂ ಕಳೆದುಕೊಂಡು ನಿರ್ಗತಿಕ ಸ್ಥಿತಿ ತಲುಪಿ, ಇದ್ದೊಂದು ಮನೆಯನ್ನೂ ಮರಾಟಕ್ಕಿಡುವ ಸ್ಥಿತಿಗೆ ತಲುಪಿದ್ದ. ಗೌರವಾನ್ವಿತ ಶ್ರೀಮಂತ ಮನೆತನ – ಈಗ ದಾರುಣ ಸ್ಥಿತಿ ತಲುಪಿತ್ತು. ಅದೇ ಸಂದರ್ಭದಲ್ಲಿ ಬಸವಕಲ್ಯಾಣಕ್ಕೆ ಮಹಾಂತಜೋಳಿಗೆಯೊಂದಿಗೆ ಮಹಾಂತರು, ಶರಣರು ಬಂದರು. ಮಹಾಂತಜೋಳಿಗೆ ಕಾರ್ಯಕ್ರಮದಲ್ಲಿ ಸಾವಿರಾರು ಜನ ಉಪಸ್ಥಿತರಿದ್ದರು. ಪೂಜ್ಯರು, ಶರಣರು ದುಶ್ಚಟ – ದುರ್ವ್ಯಸನಗಳ ಕುರಿತು ಅನುಭಾವ ನೀಡಿದರು. ಅನೇಕ ಜನ ಎದ್ದು ಬಂದು ಚಟಗಳನ್ನು ಪೂಜ್ಯರ ಜೋಳಿಗೆಗೆ ಅರ್ಪಿಸಿ, ಆಶೀರ್ವಾದ ಪಡೆಯತೊಡಗಿದರು. ಆ ಶ್ರೀಮಂತನೂ ಎದ್ದು ಬಂದು ಪೂಜ್ಯರ ಪಾದ ಹಿಡಿದು ಪಶ್ಚಾತ್ತಾಪದ ಕಣ್ಣೀರು ಸುರಿಸುತ್ತಾ ತನ್ನ ಎಲ್ಲಾ ದುಶ್ಚಟಗಳನ್ನು ಮಹಾಂತ ಜೋಳಿಗೆಗೆ ಅರ್ಪಿಸಿ, ಪೂಜ್ಯರ ಆಶೀರ್ವಾದ – ಪ್ರಸಾದ ಪಡೆದು ಕುಳಿತನು. ಅಷ್ಟರಲ್ಲಿ ಅವರ **'ಧರ್ಮಪತ್ನಿ'** ಎದ್ದು ಬಂದು ಆನಂದದ ಆಶ್ರು ಸುರಿಸುತ್ತಾ ಪೂಜ್ಯ ಶ್ರೀಗಳ ಪಾದಕ್ಕೆ ನಮಸ್ಕರಿಸಿ – 'ಅಪ್ಪಾ ಅವರೆ ನೀವು ಮಹಾಂತಜೋಳಿಗೆ ಕಾರ್ಯಕ್ರಮಕ್ಕೆ ಇಂದು ನಮ್ಮೂರಿಗೆ ಬರದೇ ಹೋಗಿದ್ದರೆ, ನಾನು ನನ್ನ ಮಕ್ಕಳೊಂದಿಗೆ ತ್ರಿಪುರಾಂತಕ ಕೆರೆಯಲ್ಲಿ ಮುಳುಗಿ ಪ್ರಾಣಾರ್ಪಣೆ ಮಾಡಲು ನಿರ್ಧರಿಸಿದ್ದೆ. ನೀವು ನನ್ನ ಪತಿಯನ್ನಷ್ಟೇ ಅಲ್ಲ, ನನ್ನನ್ನು, ನನ್ನ ಮಕ್ಕಳನ್ನು, ನಮ್ಮ ಕುಟುಂಬವನ್ನೂ ಉಳಿಸಿದ್ದೀರಿ. ನಮಗೆಲ್ಲ ಪುನರ್‌ಜನ್ಮ ಕೊಟ್ಟಿದ್ದೀರಿ. ನಿಮ್ಮ ಮಹಾಂತ ಜೋಳಿಗೆಯ ಉಪಕಾರ

ಎಂದೆಂದೂ ಮರೆಯುವುದಿಲ್ಲ. ಅಪ್ಪಾ ಅವರೆ ಎಂದು ಹೃದಯತುಂಬಿ ಆ ತಾಯಿ ನುಡಿದಳು. ಆಗ ಪೂಜ್ಯರು ದಂಪತಿಗಳನ್ನು ಹತ್ತಿರ ಕರೆದು-ಅವರಿಗೆ ಕಲ್ಲುಸಕ್ಕರೆ ಪ್ರಸಾದ ನೀಡಿ ಸದ್ಗುಣ-ಸದಾಚಾರದಿಂದ ಕಾಯಕ-ದಾಸೋಹ ಜೀವಿಗಳಾಗಿ ಬಾಳಿರಿ ಎಂದು ಆಶೀರ್ವದಿಸಿದರು.

೮. ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಕಾಪನಹಳ್ಳಿ ಗವಿಮಠದಲ್ಲಿ ೧೯೯೦ರಲ್ಲಿ ಒಂದು ವಾರ ಶಿವಾನುಭವ ಶಿಬಿರ ಹಾಗೂ ಸುತ್ತಲಿನ ಗ್ರಾಮಗಳಲ್ಲಿ ಮಹಾಂತಜೋಳಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಒಂದು ಚಿಕ್ಕ ಗ್ರಾಮದಲ್ಲಿ ಮಹಾಂತಜೋಳಿಗೆ ಕಾರ್ಯಕ್ರಮ ಪೂಜ್ಯ ಮಹಾಂತ ಸ್ವಾಮಿಗಳು, ಪೂಜ್ಯ ಚಂದ್ರಶೇಖರ ಸ್ವಾಮಿಗಳು ಹಾಗೂ ಅನೇಕ ಪೂಜ್ಯರು, ಶರಣ ಸಾಹಿತಿಗಳು ಪಾಲ್ಗೊಂಡಿದ್ದರು. ಗ್ರಾಮದ ನೂರಾರು ಜನ ಸ್ತ್ರೀ-ಪುರುಷರು, ಯುವಕರು, ಮಕ್ಕಳು ನೆರೆದಿದ್ದರು. ದುರ್ವ್ಯಸನ-ದುಶ್ಚಟಗಳ ಬಗ್ಗೆ ಉಪನ್ಯಾಸ ಜರುಗಿದವು. ಪೂಜ್ಯರು ಕಡೆಯದಾಗಿ ಕಳಕಳಿಯಿಂದ ಕೈಮುಗಿದು ಮದ್ಯಪಾನಾದಿ ಚಟಗಳನ್ನು ನೀಡಲು ಕೇಳಿಕೊಂಡರು. ಇದರ ಪರಿಣಾಮವೆಂಬಂತೆ ಇಡೀ ಗ್ರಾಮದ ಎಲ್ಲ ಮದ್ಯಪಾನ ವ್ಯಸನಿಗಳು ಬಂದು 'ಕುಡಿತದ ಚಟಗಳನ್ನು ನೀಡಿ' ಪೂಜ್ಯರ ಆಶೀರ್ವಾದ ಪಡೆದು ವ್ಯಸನಮುಕ್ತರಾಗಿ ಪ್ರತಿಜ್ಞೆ ಗೈದರು. ಕೊನೆಗೆ ಒಬ್ಬ ಶ್ರೀಮಂತ ಯಜಮಾನ ಬಂದು, ಕೈಯಲ್ಲಿ ಮೈಕ ತಕ್ಕೊಂಡು-ಬುದ್ಧಿಯವರೆ, ನನಗೆ ಯಾವ ಚಟಗಳೂ ಇಲ್ಲ. ಈ ಊರಿನ ಎಲ್ಲರೂ ನನ್ನ ಸರಾಯಿ ಅಂಗಡಿಗೆ ಬಂದು ಕುಡಿಯುತ್ತಾರೆ. ಇವರೆಲ್ಲ ಕುಡಿಯುವ ಚಟ ತಮ್ಮ ಜೋಳಿಗೆಗೆ ನೀಡಿದ್ದಾರೆಂದರೆ ಇನ್ನು, ನನ್ನ 'ಸರಾಯಿ ಅಂಗಡಿ' ಗೆ ಕುಡಿಯಲು ಯಾರು ಬರೋದಿಲ್ಲ ಅಂದಮ್ಯಾಗ ಇದನ್ನು ತಗೊಂಡು ನಾನೇನು ಮಾಡಲಿ ಗುರುಗಳೇ, ನನ್ನ ಸರಾಯಿ ಅಂಗಡಿಯನ್ನೇ ನಿಮ್ಮ ಜೋಳಿಗೆಗೆ ಹಾಕ್ತೀನಿ ಎಂದು ಹೇಳಿದಾಗ, ಇಡೀ ಗ್ರಾಮಕ್ಕೆ ಗ್ರಾಮವೇ ಚಪ್ಪಾಳೆ ತಟ್ಟಿತು. ವ್ಯಸನಮುಕ್ತ ಗ್ರಾಮವಾಯಿತು. ಯಾವುದೇ ಕಾಯ್ದೆ-ಕಾನೂನುಗಳು ಮಾಡದ ಕಾರ್ಯವನ್ನು ಮಹಾಂತಜೋಳಿಗೆ ಮಾಡಿತು.

ಪಾಶ್ಚಿಮಾತ್ಯ ದೇಶಗಳಿಗೆ ಮಹಾಂತ ಜೋಳಿಗೆ :

೯. ೧೯೯೦ನೆಯ ಇಸ್ವಿ ಜುಲೈ ತಿಂಗಳಲ್ಲಿ ಪೂಜ್ಯ ಮಹಾಂತ ಸ್ವಾಮಿಗಳೊಂದಿಗೆ ಬೆಂಗಳೂರಿನ ಶ್ರೀ ಶಿವರುದ್ರಸ್ವಾಮಿಗಳು ಬೇಲಿಮಠ, ಅಥಣಿಯ ವಿಮೋಚನಾ ಸಂಸ್ಥೆಯ ಶ್ರೀ ಬಿ.ಎಲ್.ಪಾಟೀಲ ಹಾಗೂ ರಾಮದುರ್ಗದ ಶರಣ ಸಾಹಿತಿ, ಮಹಾಂತಜೋಳಿಗೆ ಸಂಚಾಲಕ ಪ್ರೊ. ಸಿದ್ಧಣ್ಣ ಲಂಗೋಟಿ ಯುನೈಟೆಡ್ ಕಿಂಗಡಮ್‌ಗೆ ಅಂದರೆ ಇಂಗ್ಲೆಂಡ ದೇಶಕ್ಕೆ ಹೋಗಿದ್ದೆವು. ಅಲ್ಲಿ ಲಂಡನ್ ಮಹಾನಗರದ ವಿವಿಧ ಭಾಗಗಳಲ್ಲಿರುವ ಸಂಘ-ಸಂಸ್ಥೆಗಳಲ್ಲಿ ಕಾರ್ಯಕ್ರಮಗಳು ಜರುಗಿದವು. ದಿನಾಂಕ : ೧೬-೦೭-೧೯೯೦ ರಂದು 'ಭಾರತೀಯ ವಿದ್ಯಾಭವನ' ಲಂಡನ್‌ದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ- ಶ್ರೀ ಮತ್ತೂರು ಕೃಷ್ಣಮೂರ್ತಿ ಅವರು 'ಮಹಾಂತಜೋಳಿಗೆ ಫಲಶ್ರುತಿ' ಎಂಬ ಕೃತಿಯ 'Gains -Rewards of Mahanta Jolige' ಎಂಬ ಇಂಗ್ಲೀಷ ಗ್ರಂಥವನ್ನು ಲೋಕಾರ್ಪಣ ಮಾಡಿ, ಆಂಗ್ಲನಾಡಿಗೆ ಮಹಾಂತಜೋಳಿಗೆ ಪರಿಚಯಿಸಿದರು.

ಪಾಶ್ಚಿಮಾತ್ಯ ದೇಶಗಳಾದ ಇಂಗ್ಲೇಡ, ವೇಲ್ಸ್, ಸ್ಕಾಟಲ್ಯಾಂಡ, ಐರ್ಲ್ಯಾಂಡ, ಆ್ಯಂಗಲ್‌ಸೀ ನಡುಗಡ್ಡೆಗಳಲ್ಲಿ ಅನೇಕ ಸಂಘ-ಸಂಸ್ಥೆಗಳಲ್ಲಿ ಕಾರ್ಯಕ್ರಮ ಜರುಗಿದವು. ಶ್ರೀ ಮುರುಘನ್ ಟೆಂಪಲ್ ಅಸೋಸಿಯೇಶನ್, ವಿಶ್ವಹಿಂದೂ ಪರಿಷತ್, ಬ್ರೆಂಟ್ ಇಂಡಿಯಾ ಅಸೋಸಿಯೇಶನ್, ಶ್ರೀ ರಾಮಕೃಷ್ಣ ವೇದಾಂತ ಸೆಂಟರ್, ಹ್ಯಾರೋ ಎಲ್ಡರ್ ಅಸೋಸಿಯೇಶನ್, ವಲ್ಲಭ ನಿಧಿ ಸಂಸ್ಥೆ, ಸೇಂಟ್ ಕ್ಲೇರ್ಸ್ ಚರ್ಚ, ಜೈನ ಅಸೋಸಿಯೇಶನ್, ನವರಾತವಣಿಕ ಸಂಘ ಮುಂತಾದ ಸಂಸ್ಥೆಗಳಲ್ಲಿ ಕಾರ್ಯಕ್ರಮ ಜರುಗಿದವು.

ಯುರೋಪ ಖಂಡದಲ್ಲಿ ನೆಲೆಸಿರುವ ಭಾರತೀಯರು ಹಾಗೂ ಅನೇಕ ದೇಶಗಳ ಜನರು ಭಾಗವಹಿಸಿದ್ದ ಕಾರ್ಯಕ್ರಮಗಳಲ್ಲಿ ಪೂಜ್ಯ ಮಹಾಂತ ಸ್ವಾಮಿಗಳವರು ಸಭೀಕರನ್ನು ಉದ್ದೇಶಿಸಿ – **'ನಾವು ಆಂಗ್ಲನಾಡಿಗೆ ಬಂದಿರುವುದು ನಿಮ್ಮಿಂದ ಧನ, ಕನಕ, ಡಾಲರ, ಪೌಂಡ ಇತ್ಯಾದಿ ಬೇಡಲು ಅಲ್ಲ,** ನಿಮ್ಮನ್ನು ನಿಮ್ಮ ಕುಟುಂಬವನ್ನು ರಾಷ್ಟ್ರಗಳನ್ನು ಹಾಳು ಮಾಡುತ್ತಿರುವ, ನಾಶ ಮಾಡುತ್ತಿರುವ ದುರ್ವ್ಯಸನ, ದುರಾಚಾರ, ಯುದ್ಧ, ಕಲಹ, ಮಾರಾಕಾಸ್ತ್ರಗಳ ದುರ್ಬಳಕೆಗಳ ಭಿಕ್ಷೆ ಬೇಡಲು ಬಂದಿದ್ದೇವೆ. ರಾಗ-ದ್ವೇಷ, ಅಸೂಯೆ-ಮತ್ಸರ, ಆಸೆ-ದುರಾಸೆ, ವಿಷಯ ಲಂಪಟತನ-ವಿಕೃತ ಭೋಗಗಳು ಅಳಿಯಬೇಕು, **ಮಾನವಕುಲ ಉಳಿಯಬೇಕು, ಸಕಲಜೀವರಾಶಿಗಳಿಗೆ ಲೇಸಾಗಬೇಕು** ಎಂಬ ಮಹೋದ್ದೇಶದಿಂದ 'ಮಹಾಂತ ಜೋಳಿಗೆ' ಗೆ ಭಿಕ್ಷೆ ಬೇಡಲು ಬಂದಿದ್ದೇವೆ. ಭಾರತದ ಯುವ ಜನಾಂಗ ನಿಮ್ಮ ಭೋಗ ಜೀವನ ನೋಡಿ, ಕೇಳೀ ಅನುಕರಣೆ ಮಾಡುತ್ತಿದೆ. ನೀವು ಸದ್ಗುಣಿ-ಸದಾಚಾರಗಳಾದರೆ ಜಗತ್ತು ನಿಮ್ಮನ್ನು ಅನುಸರಿಸುವಂತಾಗಬೇಕು' ಎಂದು ಕಳಕಳಿಯಿಂದ ಕೇಳಿಕೊಂಡರು. ಕಾರ್ಯಕ್ರಮದ ಕೊನೆಯಲ್ಲಿ ಅನೇಕರು ತಮ್ಮ ವ್ಯಸನಾದಿಗಳನ್ನು ಪೂಜ್ಯರ ಜೋಳಿಗೆಗೆ ಅರ್ಪಿಸಿದರು. ಸಭೆಯಲ್ಲಿ ಭಾಗವಹಿಸಿದ್ದ ಜನರಲ್ಲಿ ೯೦ ವರುಷದ ವಯೋವೃದ್ಧ ಮಹಿಳೆಯೊಬ್ಬರು ಎದ್ದು ಬಂದು ಪೂಜ್ಯರಿಗೆ ನಮಸ್ಕರಿಸಿ ಮಾತನಾಡುತ್ತಾ – 'ನಾನು ಭಾರತದಿಂದ ಪಾಶ್ಚಿಮಾತ್ಯ ದೇಶಗಳಿಗೆ ಬರುವ ಅನೇಕ ಸ್ವಾಮಿ – ಸನ್ಯಾಸಿಗಳನ್ನು ನೋಡಿದ್ದೇನೆ. ಬಹುತೇಕರು ಆಧ್ಯಾತ್ಮ, ಧ್ಯಾನ, ಯೋಗಗಳ ಹೆಸರಿನಲ್ಲಿ ಹಣಗಳಿಸುವ ದುರಾಸೆಯವರನ್ನು, ವಿಷಯಾಸಕ್ತರನ್ನು, ಭೋಗಿಗಳನ್ನು ನೋಡಿ ಜಿಗುಪ್ಸೆಗೊಂಡಿದ್ದೆ. ನನ್ನ ಈ ತೊಂಬತ್ತು ವರುಷಗಳ ಆಯುಷ್ಯದಲ್ಲಿ **ದುಡ್ಡಿಗಾಗಿ ಜನರ ಮುಂದೆ ಕೈಯೊಡ್ಡದ ಏಕೈಕ 'ಸಾಧು ಮಹಾರಾಜ'** ರನ್ನು ನೋಡಿದೆ. ನಿಮ್ಮಿಂದ ಜಗತ್ತು ಉದ್ಧಾರವಾಗುತ್ತದೆ ಜನ ಕಲ್ಯಾಣ-ಲೋಕಕಲ್ಯಾಣವಾಗುತ್ತದೆ. ನಿಮಗೆ ಅನಂತ ಪ್ರಣಾಮಗಳು' ಎಂದು ಆನಂದಾಶ್ರುಗಳನ್ನು ಸುರಿಸುತ್ತಾ ನುಡಿದರು.

ಈ ರೀತಿಯಾಗಿ ಮಹಾಂತ ಶಿವಯೋಗಿಗಳು 'ಮಹಾಂತ ಜೋಳಿಗೆ'ಯ ಮೂಲಕ **ವ್ಯಸನಮುಕ್ತ ವ್ಯಕ್ತಿ-ಕುಟುಂಬ-ಸಮಾಜ-ರಾಷ್ಟ್ರ-ಪ್ರಪಂಚ ನಿರ್ಮಾಣ** ವಾಗಬೇಕೆಂಬ ಮಾನವೀಯ ಕಳಕಳಿಯಿಂದ ಅವಿಶ್ರಾಂತವಾಗಿ ಜಂಗಮ ಕಾಯಕ ಮಾಡುತ್ತಾ ೮೮ ವರುಷಗಳ ಜೀವನನ್ನು ಬಾಳಿ, 'ಕೂಡಲಸಂಗನ ಒಲಿಸಬಂದ

ಪ್ರಸಾದಕಾಯ ಕೆಡಿಸಲಾಗದು' ಎಂಬ ಬಸವ ಸಂದೇಶ ಆಚರಿಸುತ್ತಾ ಬಸವ ಮಹಾಬಯಲಲ್ಲಿ ಬಯಲಾದವರು (ಲಿಂಗೈಕ್ಯರಾದವರು).

ಪೂಜ್ಯರ ಈ ಮಹಾಂತಜೋಳಿಗೆ ಕಾರ್ಯದಲ್ಲಿ ಪಾಲ್ಗೊಂಡು ಪ್ರಭಾವಿತರಾದ ಅನೇಕ ಕವಿ-ಸಾಹಿತಿಗಳು, ಗುರು-ಜಗದ್ಗುರುಗಳು, ವಚನಕಾರರ ಅಭಿಪ್ರಾಯಗಳು-ಕವಿತೆಗಳು ಕೆಲವು ಹೀಗಿವೆ-

೧. ಮಹಾಂತ ಭಿಕ್ಷೆ :

ಚಿತ್ತ ಚಿತ್ತರಗಿಯಲಿ ಮೂಡಿತು, ಹತ್ತು ದಿಕ್ಕಿಗೂ ಬಾಚಿತು ।
ಶ್ರೀ ವಿಜಯಮಹಾಂತೇಶ ಧ್ಯಾನದಿ, ಹೊಚ್ಚ ಹೊಸಬಗೆ ತೆರೆಯಿತು ॥

ಪದವಿ ಪಲ್ಲಕ್ಕಿಗಳ ಮೆಲ್ಲಗೆ ಬದಿಗೆ ಸರಿಸುತ ಮಾಗಿತು ।
ಹೃದಯದಂತಃಕರಣ ಜೋಳಿಗೆ ಜನದ ಹತ್ತಿರ ಸಾಗಿತು ॥

ಊರು ಊರಿಗು ನಡೆದೆ ನಡೆದರು ನೀತಿ ನಿಚ್ಚಳ ನಡತೆಗೆ ।
ಕೇರಿ ಕೇರಿಯ ಮನೆಯ ಬಾಗಿಲ ತೆರೆದು ಕರೆದರು ಬೆಳಕಿಗೆ ॥

ದುಡ್ಡು ದುಗ್ಗಾಣಿಯನು ಕೇಳೆನು ನಿಮ್ಮ ನೆಮ್ಮದಿ ಬಾಳಿಗೆ ।
ನೀಡಿರಯ್ಯಾ ದುಷ್ಟ ಚಟಗಳ ತುಂಬಿಕೊಳುವೆನು ಜೋಳಿಗೆ ॥

ಇದ್ದು ಬಿದ್ದುದ ಕಳೆದುಕೊಂಡಿರಿ ಬಡತನದಿ ಬೆಂಡಾದಿರಿ ।
ಯಾವ ಮೊಗದಲು ನಗೆಯು ಕಾಣದು ಸಾವ ಮೊದಲೇ ಸತ್ತಿರಿ ॥

ಬಾಯ ಮಾತೇ ಕಾಯಕವು ? ನಿಜ ದುಡಿಮೆಗೆಂದೇ ದೇಹವು ।
ಮನಸ್ಸಿನಲ್ಲೇ ಮಹಾದೇವನು ಗುಡಿಯೊಳೇನಿದೆ ? ಗಂಟೆಯು ॥

ಗುಡಿಸಿರೆಲ್ಲಾ ಮನದ ಮೂಲೆಯ ಹಿಡಿಸಬಹುದೀ ಜೋಳಿಗೆ ।
ಕಳಿಸಬೇಡಿರಿ ಬರಿಯ ಕೈ, ಹಳಹಳಿಸಬೇಡಿರಿ ನಾಳೆಗೆ ॥

ಎಲ್ಲ ವ್ಯಸನಗಳಿಲ್ಲೇ ಹಾಕಿರಿ ಸಲ್ಲಲಿಂದೇ ಸ್ವಾಮಿಗೆ ।
ಬಿಟ್ಟೆನೆಂದರೆ ಬಿಡದ ಮಾಯೆಯ ಕಟ್ಟಿ ಹಾಕುವ ನೇಮಿಗೆ ॥

ದಾರಿಯಿನ್ನೂ ದೂರವಿದೆ, ಆ ಸೂರ್ಯ ಚಂದ್ರರು ಸುತ್ತಲಿ ।
ಅಚ್ಚ ಬದುಕಿನ ಹಣತೆ ಹೊತ್ತಿಸಿ ನಿಚ್ಚ ಬಾಳನು ಬೆಳಗಲಿ ॥

– ಕವಿ – ನಾಡೋಜ ಡಾ. ಚನ್ನವೀರ ಕಣವಿ, ಧಾರವಾಡ

೨. ಚಟಗಳ ಭಿಕ್ಷೆ ಬೇಡ್ಯಾರೋ

ಬೆಳ್ಳನ್ನ ಪಾದಕ್ಕೆ ತೆಳ್ಳನ ಆವುಗಿ
ಕಾಣದ ಜೋಲಿಗೆ ಕೈಯಾಗ । ಮಹಾಂತೇಶ
ಚಟಗಳ ಭಿಕ್ಷೆ ಬೇಡ್ಯಾರೋ ॥

ಧನವ ಬೇಡವರಲ್ಲ ಧಾನ್ಯ ಬೇಡವರಲ್ಲ
ಪಲ್ಲಕ್ಕಿ ಏರಿ ಮೆರೆದಿಲ್ಲೊ । ಮಹಾಂತೇಶ
ಚಟಗಳ ಭಿಕ್ಷೆ ಬೇಡ್ಯಾರೊ ॥

ಕವಿ – ಶ್ರೀ ದಾನಪ್ಪ ಜತ್ತಿ ಶಾಸ್ತ್ರಿಗಳು
ತಿಕೋಟಾ ಜಿ ॥ ವಿಜಯಪುರ

೩. ಇಲಕಲ್ಲ ಯತಿಯ ಕ್ರಾಂತಿ

ಇಳಕಲ್ಲ ಯತಿ ಸೋಂಕೆ ಮೂರ್ತಿಯಾದವು ಕಲ್ಲು ।
'ಇಲ್ಲಕಲ್ಲು, ಇಲ್ಲಕಲ್ಲು' ಎಂಬುದಲ್ಲಿಯ ಸೊಲ್ಲು ॥

ಕಲ್ಲು ಲಿಂಗಗಳಾಗಿ ಜೋಳಿಗೆಯ ಸೇರಿವೆ ।
ಲಿಂಗ ಬೇಕೆನ್ನುವರ ಎದೆಗಳನ್ನೇರಿವೆ ॥

ಬರಿದಾದ ಜೋಳಿಗೆಗೆ ಹರಿದು ಬರುವವು ವ್ಯಸನ ।
ವ್ಯಸನ ಮುಕ್ತರಿಗಂದು ಸೊಗದ ನವಜೀವನ ॥

ಸದ್ದಿರದ ಕ್ರಾಂತಿಯಿದು ಸುದ್ದಿಯಾಗದ ಕ್ರಾಂತಿ ।
ಬರಿಯ ಹೊರಮೈ ಕ್ರಾಂತಿಯಲ್ಲ ಒಳಮೈ ಕ್ರಾಂತಿ ॥

ಸಿದ್ಧವಿದೆ ನಾಡೆಲ್ಲ ಈ ವಿಧದ ಕ್ರಾಂತಿಗೆ ।
ಇದುವೆ ಹಾದಿಯು ನಮಗೆ ಸಿರಿ ಸೌಖ್ಯ ಶಾಂತಿಗೆ ॥

ಇಲಕಲ್ಲ ಯತಿ ಬರಲಿ ಊರೂರು ಕೇರಿಗೆ ।
ಬರಲಿ ನಾಡವರೆಲ್ಲ ಇವನ ಈ ದಾರಿಗೆ ॥

– ಕವಿ ಡಾ ಸಿದ್ಧಯ್ಯ ಪುರಾಣಿಕ, ಬೆಂಗಳೂರು

೪. ಮಹಾಂತ ಜೋಳಿಗೆ

ಮಹಾಂತ ಬಂದಿಹನೇಳು ಬಾಗಿಲಿಗೆ ।
ಬಸವ ಬಂದಿಹನೇಳು ॥ಪಲ್ಲವಿ॥

ನಿನ್ನನೆಬ್ಬಿಸಲೆಂದು ದಿವ್ಯ ಜೋಳಿಗೆ ಹಿಡಿದು
ಮಹಾಂತ ಬಂದಿಹನೇಳು ಬಾಗಿಲಿಗೆ ॥ ॥ ಅ.ಪ ॥

ಚಿತ್ತರಗಿ ಪೀಠದ ದಿವ್ಯ ಜೋಳಿಗೆ ಹಿಡಿದು
ಚಿತ್ತ ಶುದ್ಧಿ ಮಾಡಲು ಪಣವ ತೊಟ್ಟಿಹೆನು ॥ ೧ ॥

ಹೊನ್ನು ಕೇಳಲು ಅಲ್ಲ, ಅನ್ನ ಕೇಳಲು ಅಲ್ಲ
ಹಾಳು ಮಾಡುವ ಚಟವ ಬೇಡ ಬಂದಿಹನು ॥ ೨ ॥

ಕಾಮಾದಿಗಳ ಗೆದ್ದು ಸ್ಥಿತಪ್ರಜ್ಞ ತಾನಿದ್ದು
ಕಾಯದ ಕಲ್ಮಶವ ಕಳೆಯ ಬಂದಿಹನು ॥ ೩ ॥

ಸಕಲ ಆಶೆಯ ತೊರೆದು ದೀನ ಭಕ್ತರ ಬೆರೆದು
ಲೋಕ ರಕ್ಷಣೆಗಾಗಿ ಹೊರಟು ನಿಂತಿಹನು ॥ ೪ ॥

ಧರ್ಮ ಜಾಗೃತಿಗಾಗಿ ಲಿಂಗಮೂರುತಿಯಾಗಿ
ಮನೆ ಮನೆಗೂ ದರುಶನ ನೀಡ ಬಂದಿಹನು ॥ ೫ ॥

ಯೋಗಿ ಬಂದಿಹನೆಂದು ದೃಢದಿ ಆತನ ನಂಬು
ತ್ಯಾಗಿಯ ಮಾಗಿದ ನುಡಿ ಬಾಳಿಗದು ಇಂಬು ॥ ೬ ॥

ಕವಿ – ಶ್ರೀ ವೀ. ವಿ. ತೆಗ್ಗಿ ಗುರುಗಳು ಇಳಕಲ್ಲ

೫. ಮಹಾಂತನ ಶಾಂತಿ ಜೋಳಿಗೆ

ಬೇಡ ಬಂದೆನು ದುಷ್ಟ ಚಟಗಳ ನೀಡಿರಯ್ಯ ಭಿಕ್ಷೆಯ ।
ನೋಡ ಬಯಸಿಹೆ ಬಾಳ ಹದುಳವ ಪಡೆಯಿರೊ ಶಿವರಕ್ಷೆಯ ॥

ನಿಮ್ಮ ಬಾಗಿಲದಲ್ಲಿ ನಿಂತಿಹೆ ಮಹಾಂತ ಜೋಳಿಗೆ ತಂದಿಹೆ ।
ಹತ್ತೂ ಚಟಗಳ ಬೇಡ ಬಂದಿಹೆ ನೀಡಿರೊಂದನ್ನಾದರೂ.. ॥

ದವಸ ಬೇಡೆನು, ಧಾನ್ಯ ಬೇಡೆನು ಕಾಸು ಬೇಡೆನು ನಿಮ್ಮನು ।
ಕತ್ತು ಹಿಸುಕುವ ಚಟವ ಬೇಡುವೆ ನೀಡುವಿರಾ ನಮಗೊಂದನು ॥

ಒಂದೇ ಎರಡೇ ಏಸೋ ಚಟಗಳು ಘಾಸಿಗೊಳಿಸಿವೆ ಬಾಳನು ॥
ದೇಹ ಮನಗಳ ತಿಂದು ತೇಗಿವೆ ಜೀವ ತಲ್ಲಣಗೊಂಡಿದೆ ॥

ಹಣವ ಬಳಸುವ ನೀರಿನಂತೆಯೆ ಎಂಥ ದುಡಿಮೆಯೂ ಸಾಲದು ।
ಕಷ್ಟ ಕಳವಳ ಚಿಂತೆ ಚಿತೆಯಲಿ ಜೀವ ಬೆಂದಿದೆ ತಾಳದು ॥

ನೂರು ತಲುಬಿನ ಅಸ್ಥಿಪಂಜರ ಸಾಕು ಮಾಡೋ ಚಟಗಳ ।
ಹಾಕಿ ಬಿಡು ಜೋಳಿಗೆಗೆ ತೊಲಗಲಿ ಸುತ್ತಿ ಸುಳಿಯುವ ಹಟಗಳ ॥

ವಿಜಯ ಮಹಾಂತನ ಮಹಾಂತ ಜೋಳಿಗೆ ನಾಡಿನುದ್ದಗಲಕೂ ಸಾಗಿದೆ ।
ಚಟದ ಬಂಧನ ಕಳಚಿ ಮಾನವ ಹೊರಗೆ ಹೊರಟು ಬರಬೇಕಾಗಿದೆ ॥

ಬಸವ ಶರಣರ ಕ್ರಾಂತಿ ಜೋಳಿಗೆ ಅಂದು ಎಂದಿಗೂ ಬಾಳಿಗೆ ।
ಇಂದು ಮಹಾಂತನ ಶಾಂತಿ ಜೋಳಿಗೆ ಆತ್ಮ ಹೃದಯಕೆ ಹೋಳಿಗೆ ॥

ಬನ್ನಿ ಗೆಳೆಯರೆ, ಬನ್ನಿ ಎಳೆಯರೆ, ಬನ್ನಿ ಬೆಳೆವವರು ಬನ್ನಿರೋ ।
ನಿಮ್ಮ ಚಟಗಳ ಬಿಟ್ಟು ಬನ್ನಿರೊ ನಾಡಿಗ್ಯೆಸಿರಿ ತನ್ನಿರೋ ॥

– ಶಿವಕವಿ ಸಂಗಮೇಶ ಹೊಸಮನಿ ಸಾ ॥ ರಾಮವಾಡಗಿ

೬. ಯೋಗಿ ಭಿಕ್ಷಕೆ ಬಂದ

ಯೋಗಿ ಭಿಕ್ಷಕೆ ಬಂದಾ ಶಿವಯೋಗಿ
ಜೋಳಿಗೆ ತಂದಾ
ಮುತ್ತು ಮಾಣಿಕ್ಯವ ತಾ ಒಲ್ಲೆನೆಂದ
ದುಷ್ಟ ಚಟಗಳ ಜೋಳಿಗೆಗೆ ಹಾಕಿರೆಂದಾ

–ಕವಯಿತ್ರಿ ಕಮಲಾಕ್ಷಮ್ಮ ಹರಿಹರ ಸಾ ॥ ಇಲಕಲ್ಲ

೭. ಜಗವನುದ್ಧರಿಪ ಮಹಾಂತ ಜೋಳಿಗೆ

ಜೋಳಿಗೆ ವಿಜಯಮಹಾಂತನ ಜೋಳಿಗೆ
ಬರಿಯ ಹೆಸರಲ್ತು ಇಹವ ಮಹಗೊಳಿಸಿ
ಸಗ್ಗವನಿಳೆಗಿಳಿಸಿಹ ಮಹದ ಮಹಂತನ ಮತಿ
ನಿನ್ನ ಕಾಯಕ ದೀಪ್ತಿ ಜಗಕೆ ಸಂಪ್ರಾಪ್ತಿ
ಕಲಿತ ದುಶ್ಚಟಗಳನೆಲ್ಲ ನಿನ್ನ ಜೋಳಿಗೆ ಪಾಲು
ನೆಮ್ಮದಿಯ ಬದುಕು ಇದು ಜನರ ಪಾಲು

ಧೂಮಪಾನವೆ ಇರಲಿ ಮದ್ಯಪಾನವೆ ಇರಲಿ
ದುಶ್ಚಟವು ಏನೇ ಇರಲಿ ನೀಗಿಸುವೆ ನೀ
ಸನ್ನಡತೆಯ ಮಾರ್ಗದಿ ಚಾಗಕೆ ತೋರಿ
ಮರ್ತ್ಯದ ಮನದ ಮೈಲಿಗೆ ತೊಳೆದೆ
ಜಗವನುದ್ಧರಿಪ ಕಾಯಕ ನಿನ್ನದಾಯ್ತು
ಓ ಜಂಗಮ ಚಕ್ರಿ ಬಡವರ ಕಾಮಧೇನು
ಚಿತ್ತರಗಿ ಕಲ್ಪತರು ಶ್ರೀ ಮಹಾಂತೇಶ
ನಿನ್ನ ಕಾಯಕ ದೀಪ್ತಿಗೆ ನಿನ್ನ ಮಹಂತಕೆ
ನಿನ್ನ ಕಾಯಕ ತಪಕೆ ಜಗದ ಕೋಟಿ ನಮನ

ಕವಯಿತ್ರಿ– 'ರಾಜೇಂದ್ರ ಶಿಶು' ನೀಲಾಂಬಿಕಾ, ಮೈಸೂರು

೮. ಜಂಗಮ ಜೋಳಿಗೆ

ಜಂಗಮಗೊಂದು ಜೋಳಿಗೆಯೆನ್ನುತ
ಮಂಗಳ ಮಹಾಂತರು ಹೆಜ್ಜೆಯ ಹಾಕುತ
ಭಂಗವ ಪಡಿಸುತ ಜನತೆಯ ದುಶ್ಚಟ
ಚೆಂದದಿ ಗುರುಗಳು ಭಿಕ್ಷೆಯ ಕೇಳುತ

ನಿಮ್ಮನ್ನು ಬೇಡೆನು ಆಸ್ತಿಯು ಹಣವನು
ಬಿಮ್ಮಗೆ ಅಂಟಿದೆ ದುಶ್ಚಟ ನಿಮ್ಮನು
ಒಮ್ಮನದಿಂದಲಿ ನೀಡಿರಿ ಚಟವನು
ಚಿನ್ಮಯ ಕೇಳುವ ಹೊಸದಿಂಪರಿಯನು

ಕುಡಿತವು ಜೂಜು ಮಟಕಾ ತಂಬಾಕು
ಬಿಟದಲೆ ಸೇವನೆ ಮಾಡುವುದು ಸಾಕು
ಮಿಡುಕದೆ ಬಸವನ ನೆನೆಯುತ ಹಾಕು
ಹಿಡಿದಿಹ ಜೋಳಿಗೆಯೊಳಗೇ ನೂಕು

ಧನ ಧಾನ್ಯ ಬೇಡುವ ಜಂಗಮ ಕೂಡ
ಜನತೆಗೆ ಅಚ್ಚರಿ ಈ ಪರಿಯಿಂದ
ಘನವಂತ ಮಾಂತನ ಲೀಲೆಯು ಚೆಂದ
ಮನದಿಂ ನೀಡುತ ಬಾಳ್ವರು ಅಂದ

– ಕವಿ ಜಿ. ಎಸ್. ವಸಂತ ಮಾಸ್ತರು ಸಾ॥ ಮೊಳಕಾಲ್ಮೂರು

೯. ವ್ಯಸನಗಳ ಮೂಲ

ಕೆಟ್ಟ ವ್ಯಸನಗಳನು ಮಾಡಬೇಡಿರಣ್ಣಾ
ವ್ಯಸನ ಮೂಲವನು ತಿಳಿದು ನೋಡಣ್ಣಾ ॥ ಪ ॥

ದುಷ್ಟರ ಸಂಗವೇ ಚಟಕೆ ಮೂಲ
ಆಲಸ್ಯತನವೆಲ್ಲಾ ಅದಕ್ಕೆ ಬಾಲ
ವ್ಯಸನಗಳಿಗೆ ಜನ ಸಾಲ ಕೊಡುವರು
ನಿನ್ನ ಆಸ್ತಿಗೆ ಅವರು ಗುರಿಯ ಇಡುವರು ॥ ೧ ॥

ಆಯುಷ್ಯ ಆರೋಗ್ಯ ಆಹುತಿ ಪಡೆವ
ಮನೆತನ ಹಣ ಆಸ್ತಿ ಹಾಳು ಮಾಡುವ
ಊರ ಬಿಡಿಸಿ ಬಲು ದೂರ ಕಳಿಸುವ
ಕೆಟ್ಟ ವ್ಯಸನ ವಾಸನೆಯೇ ಮೂಲ ॥ ೨ ॥

ಬಿತ್ತಿದ ಬೀಜವ ಬೆಳೆಯುವ ಕಾಯ
ಜಾಲಿ ಬಿತ್ತಿದರೆ ಕಾಲಿಗೆ ಮೂಲ
ಬಿತ್ತಿದ ಬೀಜ ಯಾವುದು ಎಂಬರಿವಿರಬೇಕು
ದುರ್ವ್ಯಸನವೇ ದುಃಖದ ಮೂಲ ॥ ೩ ॥

ಗೊತ್ತಿದ್ದೂ ಬಿತ್ತೀದಿ ಜಾಲಿ ಮುಳ್ಳನು
ಅತ್ತೇ ಅಳತೀಯಲ್ಲ ಹಣೆಬರಹವೆಂದು
ಚಿತ್ತರಗಿ ಗುರುವು ಕರುಣೆಯ ಮಾಡುತ
ಭಕ್ತರಿಗೆ ಬಿತ್ತುವನು ಧನ್ಯತೆಯ ಬೀಜ ॥ ೪ ॥

ವ್ಯಸನಗಳೆಂದರೆ ವಿಷವುಯೆಂದು
ವಿಜಯ ಮಹಾಂತೇಶ್ವರ ಆದೇಶವು
ವಿವೇಕದಿಂದ ಸನ್ಮಾರ್ಗ ಹಿಡಿಯಲು
ವಿಜಯದ ಬದುಕನು ತಿಳಿಸುವರು ॥ ೫ ॥

ರಚನೆ–ಪೂಜ್ಯ ಶ್ರೀ ಶಾಂತ ಗಂಗಾಧರ ಸ್ವಾಮಿಗಳು
ಗುರುದೇವ ಆಶ್ರಮ ಸಿಂದಗಿ ಜಿ ॥ ವಿಜಯಪುರ

೧೦. ಮಹಾಮೇರು ನಿಮಗೆ ಸಮನಾರು ?

ಇಳೆಯ ಕಲ್ಲುಗಳ ಮೂರ್ತಿಗೊಳಿಸಿದ ಶಿಲ್ಪಿ
ಲೋಕದ ಡೊಂಕ ತಿದ್ದುವ ಮೊದಲು
ತನುಮನವ ಸಂತೈಸಿಕೊಂಡ ಲೋಕಸಂಚಾರಿ,
ಸುಜ್ಞಾನಿ ಸದ್ಭಾವಿ ಜಂಗಮ ತಂಗಾಳಿ
'ತನುವಿನಲಿ ನಿರ್ಮೋಹ
ಮನದಲ್ಲಿ ನಿರಹಂಕಾರ
ಧನದಲ್ಲಿ ಶುಚಿ
ಭಾವದಲಿ ದಿಗಂಬರ'ವೆಂಬ
ಶರಣವಾಣಿಗೆ ಜೀವತುಂಬಿದ ಮಹಾಂತ
ಪ್ರತ್ಯಕ್ಷ ಸಾಕ್ಷಿ ಕಂಡಿತು ಸಮಾಜದ ಅಕ್ಷಿ
ಒದ್ದ ಮಗುವಿನ ಕಾಲಿಗೆ ಮುದ್ದಿಟ್ಟ
ಮಾತೃಹೃದಯ ಬಸವನ ಬಿಟ್ಟರೆ
ಇನ್ನಾರಿಗುಂಟು ಈ ಎದೆಗಾರಿಕೆ
ಹೃದಯವಂತಿಕೆ ನಿಮಗಲ್ಲದೆ !
ಇರಬಹುದು ನಿಮಗಿಂತ ದೊಡ್ಡ
ಪೀಠದವರು ಮಠದವರು
ಬಿರುದು ಬಾವಲಿ ಕಿರೀಟದವರು
ಆದರೆ–
ಸಂಪ್ರದಾಯದ ಸಂಕೋಲೆಗಳ ಕಳಚುತ್ತ
ಸತ್ಯದ ಮನೆಯಲ್ಲಿ ಶಿವನ ಅರಸುತ್ತ
ದೀನ ದುಃಖಿಗಳಲ್ಲಿ, ದಲಿತ ದುರ್ಬಲರಲ್ಲಿ
ಬಸವನ ಕಾಣುತ್ತಾ
ಜಗದಗಲ ಮುಗಿಲಗಲ ಮಿಗೆಯಗಲ ಬೆಳೆದ
ಮಹಾಮೇರು ನಿಮಗೆ ಸಮನಾರು ?
ಮನ ಒಪ್ಪುವುದೇ
ನಿಮಗೆ ಶರಣೆನ್ನದಿರಲು !

– **'ಬಸವ ಸಂಜಾತೆ' ಡಾ. ಕಲ್ಯಾಣಮ್ಮ ಲಂಗೋಟಿ**

೧೧. ಮಹಾಂತರ ಪಾದ ಹಿಡಿ

ಬೀಡಿ ಬೀಡಿ ಬೀಡಿ ಎಲ್ಲಿಂದ ಬಂದೆಲೆ ಖೋಡಿ ?
ಸಣ್ಣವರಿಗೂ ದೊಡ್ಡವರಿಗೂ
ದಡ್ಡರಿಗೂ ಜಾಣರಿಗೂ
ಎಲ್ಲರಿಗೂ ಮಾಡಿದಿ ಮೋಡಿ ‖ ೧ ‖

ಕೆಮ್ಮು ದಮ್ಮು ಗೂರು ಕ್ಯಾನ್ಸರ್
ಇವೆಲ್ಲಾ ನಿನ್ನ ಜೋಡಿ ।
ಯಾರು ನಿನ್ನ ಬಾಯಾಗಿಟ್ಕೊಳ್ತಾರೋ
ಅವರ ಒಳಗೆ ಕಳಿಸ್ತೀದಿ ತ್ವರೆ ಮಾಡಿ ‖ ೨ ‖

ಕುರಿ ದನ ಕತ್ತೆ ಕುದುರೆ ನೋಡೋದಿಲ್ಲ
ನಿನ್ನ ಕಡೆಗೆ ಮುಖ ಮಾಡಿ ।
ಊರ ಹೊಲಸ ತಿನ್ನೋ ಹಂದಿ
ಕಾಣತೈತಿ ನಿನ್ನ ಕೀಳ್ಮಾಡಿ ।
ಥೂ ಥೂ ಥೂ ! ಸುಧಾರಿಸಿದ ಮನುಷ್ಯಾ
ಇಟ್ಕೊಳ್ತಾನಲ್ಲಪ್ಪಾ ಸ್ವಾಟಿ ವಾರಿಮಾಡಿ ! ‖ ೩ ‖

ಹಾವು ಸಹಾ ಓಡ್ತೈತೆ ನಿನ್ನ ಬೆಳೀಕಡೆ ಬೆನ್ಮಾಡಿ
ಕೆಟ್ಟ ವಿಷ ಅಂತ ಹೇಳ್ತಾರ ವೈದ್ಯರು
ಪರೀಕ್ಷೆ ಮಾಡಿ !
ಎಷ್ಟೋ ಹೆಣ ಕೊಯ್ದು ತೋರಿಸ್ತಾರ
ಇದು ರುಜು ಮಾಡಿ ! ‖ ೪ ‖

ಎತ್ತೆತ್ತ ನೋಡಿದಡತ್ತತ್ತ ಬೀಡಿ ಸಿಗರೇಟ ಅಂಗಡಿ
ಕರೀತಾವ ನಿಮ್ಮನ್ನ ಕೈ ಮಾಡಿ !
ತಗೊಂಡು ಬಾಯಾಗ ಇಟ್ಕೊಂಡ್ರಿ ಅಂದ್ರ
ಹೋಗ್ತೀರಿ ಮಣ್ಣು ಕೂಡಿ ‖ ೫ ‖

ಅದಕಾಗಿ ಬಂಧುಗಳೆ, ತುಸು ವಿಚಾರ ಮಾಡಿ
ದುರ್ಗಣ ದುಶ್ಚಟವ ಉಳ್ಳವರ ಸಂಗ ಬಿಡಿ !
ಲೋಕ ಗುರು ಬಸವ ಪ್ರಭು
ಮಹಾಂತರ ಪಾದ ಹಿಡಿ ! ‖ ೬ ‖

ರಚನೆ : ಪೂಜ್ಯ ಎ ಸಿದ್ಧರಾಮಣ್ಣ ಶರಣರು
ಸಂಚಾಲಕರು, ಅನುಭವ ಮಂಟಪ, ಬಸವಕಲ್ಯಾಣ

೧೨. ಇಳೆಯ ಬೆಳಕು 'ಮಹಾಂತ ಜೋಳಿಗೆ'

ಗುರುಮಹಾಂತ ಶ್ರೀಗಳ ಪ್ರಯತ್ನ ಪ್ರತಿಭೆಯ ಫಲ
ದೊರಕಿಸಿಕೊಟ್ಟಿತು. ಕರ್ನಾಟಕ ಸರ್ಕಾರದ ಆದೇಶ ಫಲ ॥
ಚಿತ್ತರಗಿ ಪೀಠದ ಚಿರಂತನ ಕೀರ್ತಿಯ ಕಲಶ.
ಉತ್ತಮ ಜೀವನದ ಸ್ಫೂರ್ತಿ 'ಮಹಾಂತ ಜೋಳಿಗೆ' ಸಂದೇಶ
ಹತ್ತೊಂಭತ್ತನೆಯ ಪೀಠಾಧಿಪತಿ ಲಿಂ. ಡಾ. ಮಹಾಂತ ಶ್ರೀಗಳು.
ಸತ್ಯ ಶಿವಯೋಗಿಯಾಗಿ ಬಾಳಿ ಬೆಳಗಿದ ಉನ್ನತಿಯ ಹೂಗಳು ॥ ೧ ॥

ಉದಾತ್ತ ಉದ್ದೇಶದ ಶ್ರೀಗಳ 'ಮಹಾಂತ ಜೋಳಿಗೆ'
ಸದಾ ಬಯಸುವದು ಭಕ್ತ ಜನರ ಏಳಿಗೆ,
ದುರ್ವ್ಯಸನ, ದುರಾಚಾರ ಬೇಡಿದ ಈ ವಿಚಿತ್ರ ಜೋಳಿಗೆ
ಸರ್ವ ಜನರ ಬಾಳಿಗಿದು ಸಿಹಿಯಾದ ಹೋಳಿಗೆ ॥ ೨ ॥

ಸೆರೆ, ಸಿಂದಿ, ಗುಟಖಾ ಸೇವಿಸಿದರೆ ದಿನ ದಿನ
ಅರಿಯದಂತೆ ಹತ್ತಿರವಾಗುವದು ಅವರ ಅವಸಾನ
ಚಟ ಬಿಟ್ಟರೆ ಘಟ ಸದೃಢವಾಗುವದು ಈ ನುಡಿ ದಿಟ.
ಹಟ ತೊಟ್ಟು ಚಟ ಬಿಡದಿರೆ ತಪ್ಪದು ಸಾವಿನ ಕಾಟ ॥ ೩ ॥

ಅಗಷ್ಟ ಒಂದು, ಲಿಂ. ಡಾ. ಮಹಾಂತ ಶ್ರೀಗಳ ಜನ್ಮದಿನ
ಜಗ ಮೆಚ್ಚುವ ಜನ ನೆಚ್ಚಿನ, ವ್ಯಸನ ಮುಕ್ತ ದಿನ
ಬೇಗ ದುಶ್ಚಟ ದೂರೀಕರಿಸಿದರೆ ಸಿಗುವುದು ಸುಖ
ನೀಗುವುದು ಬಡತನ, ಎಲ್ಲರದು ಮಂದಹಾಸದ ಮುಖ ॥ ೪ ॥

ವರ್ಷ ವರ್ಷವೂ 'ವ್ಯಸನ ಮುಕ್ತ ದಿನ' ಆಚರಿಸಲು ಸನ್ನದ್ಧ
ಹರ್ಷದಿಂದ ಸರ್ಕಾರದ ಆದೇಶ ಪಾಲಿಸಿದರೆ ಸಮೃದ್ಧಿ ಶತಸಿದ್ಧ
ಪ್ರತಿಯೊಬ್ಬರೂ ದುರಾಭ್ಯಾಸ ತ್ಯಜಿಸಲು ಆಗಬೇಕು ಕಟಿಬದ್ಧ
ನೀಡಿ ಸಂಸ್ಕೃತಿಯ ಪೀಳಿಗೆ ಏಳಿಗೆ ಹೊಂದುವದು ಶುದ್ಧ ॥ ೫ ॥

=– ಬಸವರಾಜ ಹೂಗಾರ, ಹಿರೇಸಿಂಗನಗುತ್ತಿ.

೧೩. ಆಧುನಿಕ ವಚನಕಾರರ ದೃಷ್ಟಿಯಲ್ಲಿ ಮಹಾಂತ ಜೋಳಿಗೆ– ವ್ಯಸನ ಮುಕ್ತಿ ಆಂದೋಲನದ ಮಹಾಂತರು

– ೧ –

ಬಸವ ಪಥವ ನಡೆದು ನುಡಿವ
ಶರಣ ತತ್ತ್ವ ನುಡಿದು ನಡೆವ
ಬಸವ ಸಂದೇಶ ಬಾಳಿ ಬೆಳಗುವ
ಶರಣ ಸಂಸ್ಕೃತಿಯ ಪರಿಮಳ ಸೂಸುವ
ಜೋಳಿಗೆಯ ಮಹಾಂತನ ಬದುಕ ಕಂಡು
ಭಕ್ತಪ್ರಿಯ ಶ್ರೀ ಶಿವಕುಮಾರ ಪ್ರಭುವು
ಭಲೆ ಭೇಷ್ ಎನುತಿರ್ದನಯ್ಯಾ

–ಶ್ರೀ ಪಂಡಿತಾರಾಧ್ಯ ಶಿವಚಾರ್ಯ ಸ್ವಾಮಿಗಳು
ಸಾಣೆಹಳ್ಳಿ ಜಿ ॥ ಚಿತ್ರದುರ್ಗ

– ೨ –

ಜೋಳಿಗೆ, ಮನುಜರ ಮನದ ಮೈಲಿಗೆ ತೊಳೆವ ಜೋಳಿಗೆ
ಜೋಳಿಗೆ, ಮನುಜರ ಮೈಯ ಮೈಲಿಗೆ ಹಸನ ಗೈದ ಜೋಳಿಗೆ
ಜೋಳಿಗೆ, ಜಗದ ಜೋಳಿಗೆಗಳಿಗೆ ಮಿಗಿಲಾದ ಜೋಳಿಗೆ
ಜೋಳಿಗೆ, ಜಗದ ಜೀವಿಗಳು ಬೆರಳು ಕಚ್ಚುವ ಜೋಳಿಗೆ
ಜೋಳಿಗೆ, ನಿರಂಹಕಾರ ನಿರ್ಭಯ ನಿಸ್ಸೀಮ ಜೋಳಿಗೆ
ಜೋಳಿಗೆ, ಹಿಂದೆಯೂ ಇರದ ಮುಂದೆಯೂ ಬರದ ಜೋಳಿಗೆ
ಜೋಳಿಗೆ, ಎನ್ನ ಗುರುವಿನ ಆಶ್ಚರ್ಯಕರ ಜೋಳಿಗೆ
ಬಸವಪ್ರಿಯ ಮಹಾಂತ ತಂದೆಯ ಮಹಾಂತ ಜೋಳಿಗೆ

–ಶ್ರೀ ಗುರುಮಹಾಂತ ಸ್ವಾಮಿಗಳು, ಮರೆಗುದ್ದಿ

–೩–

ನೀ ಕೊಟ್ಟ ಜೋಳಿಗೆ ಹಿಡಿದು
ಹಿಟ್ಟು ಬೇಡಿದವರುಂಟು, ರೊಟ್ಟಿ ಬೇಡಿದವರುಂಟು
ಅರ್ಥ ಬೇಡಿದವರುಂಟು, ಅರಿವೆ ಬೇಡಿದವರುಂಟು
ಪ್ರಶಸ್ತಿ ಬೇಡಿದವರುಂಟು, ಪಾರಮಾರ್ಥ ಬೇಡಿದವರುಂಟು
ಮನೆ ಬೇಡಿದವರುಂಟು, ಮಠ ಬೇಡಿದವರುಂಟು
ಶಿಷ್ಯರ ಬೇಡಿದವರುಂಟು, ಪುತ್ರರ ಬೇಡಿದವರುಂಟು

ಜೋಳಿಗೆ ಇರುವುದು ಹೋಳಿಗೆ ಬೇಡುವುದಕ್ಕಲ್ಲ.
ಬಾಳಿನ ಗೋಳು ಬೇಡಲು ಎನ್ನುವ
ಸಮಾಜ ಸಂಕಲ್ಪವ ಸಾಕಾರಗೊಳಿಸಿ
ಜೋಳಿಗೆ ಹಿಡಿದು ದುಶ್ಚಟ ಬೇಡಿದ
ಭಾರತದ ಏಕೈಕ ಸಂತ ಮಹಾಂತ
ಇಳಕಲ್ಲದ ವರಗುರು ವಿಜಯಮಹಾಂತನೆಂದ
ನಮ್ಮ ಅಥಣೀಶ.

– ಶ್ರೀ ಪ್ರಭು ಚೆನ್ನಬಸವ ಸ್ವಾಮಿಗಳು ಅಥಣಿ

– ೪ –

ಧಾನ್ಯ ಭಿಕ್ಷೆ ಬೇಡುವವರು ಬಹಳಷ್ಟು ಜನರಿರುವರಯ್ಯಾ
ಧನ ಭಿಕ್ಷೆ ಬೇಡುವವರಿಗೆ ಕೊರತೆ ಇಲ್ಲವಯ್ಯಾ !
ದುಶ್ಚಟಗಳ ಭಿಕ್ಷೆ ಬೇಡುವ ಮಹಾಂತಪ್ಪನಂಥವರು
ಎಷ್ಟು ಜನರಿರುವರಯ್ಯಾ ?
ದುರ್ಗುಣಿಗಳನು ಸದ್ಗುಣಿಗಳನ್ನಾಗಿ ಮಾಡುವ ಮಣಿಹವು
ಶ್ರೀ ಗುರು ಸಿದ್ಧಲಿಂಗೇಶ್ವರನಿಗೆ ಅಚ್ಚುಮೆಚ್ಚಿನದಯ್ಯಾ !

–ಶ್ರೀ ಅನ್ನದಾನಯ್ಯ ಪುರಾಣಿಕ, ಬೆಂಗಳೂರು

– ೫ –

ನಿಜವಾದ ಸಂತರು ಮಹಾಂತರು
ಈಗಲೂ ಇದ್ದಾರೆ ವಿರಳವಾಗಿ ನೋಡಾ !
ಇಳಕಲ್ಲಿನ ಶ್ರೀ ಮಹಾಂತ ಶಿವಯೋಗಿಗಳು ನೋಡಾ
ಬಹುತೇಕ ಲೋಕವೆಲ್ಲ ಸ್ವಾರ್ಥಕ್ಕೆ
ಜೋಳಿಗೆ ಹಿಡಿದು ತೊಳಲುತ್ತಿರುವಾಗ
ಈ ಮಹಾಂತ ಯೋಗಿ ಜೋಳಿಗೆಗೆ
ದುಶ್ಚಟಗಳ ಭಿಕ್ಷೆ ಬೇಡುತ್ತಾ ಸಂಚರಿಸುತ್ತಾರೆ.
ಕಾಯಕವೇ ಕಾಯಗೊಂಡವರಂತೆ ನಡೆದಾಡುತ್ತಾರೆ ನೋಡಾ
ಬೆಳಕಿನ ಎಳೆಯಾಗಿ ಲೇಸಿನ ಬೆಳೆಯಾಗಿ
ಕಂಗೊಳಿಸುತ್ತಾರೆ ನೋಡಾ !
ಮಠಾಧೀಶರೆಲ್ಲಾ ಮಹಾಂತ ಶಿವಯೋಗಿಗಳಾಗಲಿ
ಇಳಕಲ್ಲಿನ ಪ್ರಭೆ ಇಳೆಯಲ್ಲೆಲ್ಲಾ ಹಬ್ಬಲಿ
ಕಾರಣಿಕ ಪ್ರಭುವೆ !

– ನಾಡೋಜ ಡಾ. ಸಿ. ಪಿ. ಕೃಷ್ಣಕುಮಾರ, ಮೈಸೂರು

– ೬ –

ನಿರಾಡಂಬರ ಬದುಕಿನ ನಿರ್ಭೀತಿಯ ನಿಷ್ಠುರವಾದಿ
ನಿಶ್ಚಲ ಮನದ ನಿರಾಲ ಭಾವದ ನಿರಂಜನ ಮೂರ್ತಿ
ನೈಜ ನಡೆ ನುಡಿಯ ನಿರಾಭಾರಿ ನಿಷ್ಠಾವಂತ ಧೀಮಂತ
ಆಧ್ಯಾತ್ಮದ ಆಚಾರ–ವಿಚಾರ ಅರಿವಿನ ಅನುಭಾವಿ ಸಂತ
ಮಹಾಂತ ಜೋಳಿಗೆ ಹಿಡಿದು ಜನ ಮನದ ಕಾಳಿಕೆ ಕಳೆದು
ಹೃದಯ ಪರಿವರ್ತಿಸಿದ ಚಿನ್ಮಯಾತ್ಮ ಚಿಜ್ಯೋತಿ
ಇಳಕಲ್ಲದ ಮಹಾಂತಪ್ಪರೆಂದ ಅಂಬಿಗ ಕುಮಾರ ಚೌಡಯ್ಯ

– ಶ್ರೀ ಅಂಬಿಗಕುಮಾರ ಚೌಡಯ್ಯ , ಗದಗ – ಬೆಟಗೇರಿ

– ೭ –

ಇಳಕಲ್ಲದ ಮಹಾಂತ ಶಿವಯೋಗಿಯು
ಮಹಾಂತ ಜೋಳಿಗೆಯ ಶಿವಶಿಲ್ಪಿಯಾದನಯ್ಯಾ
ದುರಾತ್ಮರ ಕೆಟ್ಟಚಟಗಳನು ಜೋಳಿಗೆಗೆ ನೀಡಿಸಿಕೊಂಡು
ಅವರನು ದೇವಾತ್ಮರನ್ನಾಗಿ ಮಾಡಿದನಯ್ಯಾ
ಮಹಾಂತ ಶಿವಯೋಗಿ ಭವರೋಗ ವೈದ್ಯನಾದನಯ್ಯಾ
ಚಿತ್ತರಗಿ ಕರ್ತೃ ಶಿವಯೋಗೀಶ ಶ್ರೀ ವಿಜಯ ಮಹಾಂತೇಶ

– ಶ್ರೀ ಮನೋಹರ ಮೈದರಗಿ, ಹುಬ್ಬಳ್ಳಿ

– ೮ –

ಕನಕ – ಕಾಂಚನ ಬೇಡುವ ಜೋಳಿಗೆ ಅನಂತವುಂಟು
ದುಡ್ಡು – ದೌಲತ್ತು ಕೇಳುವ ಜೋಳಿಗೆ ಅನಂತವುಂಟು
ದವಸ – ಧಾನ್ಯ ಬೇಡುವ ಜೋಳಿಗೆ ಅನಂತವುಂಟು
ಹಿಟ್ಟುರೊಟ್ಟಿ ಕೇಳುವ ಜೋಳಿಗೆ ಅನಂತವುಂಟು
ಈ ಜಗದಲಿ ದುಶ್ಚಟ – ದುರ್ಗುಣ ಬೇಡುವ ಜೋಳಿಗೆ
ದುರ್ವ್ಯಸನ – ದುರಾಚಾರ ಕೇಳುವ ಜೋಳಿಗೆ
ಮಹಾಂತ ಜೋಳಿಗೆಯೊಂದೇ ನೋಡಾ
ಎನ್ನಯ್ಯಾ ಬಚ್ಚ ಬರಿಯ ಬಸವಣ್ಣ.

– ಡಾ. ಕಲ್ಯಾಣಮ್ಮ ಲಂಗೋಟಿ, ರಾಮದುರ್ಗ

– ೯ –

ಗುಟಖಾ ಮಟಕಾ ಚಟಗಳ ಭಿಕ್ಷೆ ಬೇಡಿ
ಸುರಾಪಾನ ಧೂಮಪಾನ ದುರಭ್ಯಾಸಗಳ ದೂಡಿ
ಕಂದಾಚಾರ ಅನಾಚಾರಗಳ ಬಿಡಿಸಿ
ಮೂಢನಂಬಿಕೆ ಅನಿಷ್ಟ ಪದ್ಧತಿಗಳ ಹೊಡೆದೋಡಿಸಿ
ಸಮಾಜದಲ್ಲಿ ವೈಚಾರಿಕತೆಯ ಕ್ರಾಂತಿ ಮೂಡಿಸಿದ
ಚಿತ್ತರಗಿ–ಇಳಕಲ್ಲ ಪೀಠದ ಮಹಾಂತಸ್ವಾಮಿಗಳ
ಮಹಾಂತಜೋಳಿಗೆಯ ಮಹಿಮೆ ಅಗಾಧ ನೋಡಾ
ಬಸವಪ್ರಿಯ ಶ್ರೀ ಮಹಾಂತೇಶ್ವರ

– ಶ್ರೀ ಬಸವರಾಜ ಹೂಗಾರ ಹಿರೇಸಿಂಗನಗುತ್ತಿ

– ೧೦ –

ಗಿನ್ನಿಸ್ ದಾಖಲೆ, ಪದವಿ, ಪುರಸ್ಕಾರ, ಪ್ರಚಾರಕ್ಕಾಗಿ
ಸಾಧನೆ ಮಾಡುವವರು ಲೋಕದ ಮನುಜರು !
ಮಹಾಂತ ಜೋಳಿಗೆಯ ಶಿವಶಿಲ್ಪಿ ಮಹಾಂತಪ್ಪಗಳು
ಯಾವುದೆ ದಾಖಲೆ ಪ್ರಚಾರ ಪುರಸ್ಕಾರದ ಆಸೆ ಮಾಡದೆ
ಸಮಾಜಸೇವೆ ಮಾಡುತಿಹರು ನೋಡಾ
ಶಿವಾನಂದ ಪ್ರಿಯ ಗುರುಬಸವ ಪ್ರಭುವೆ

– ಪೂಜ್ಯ ಶ್ರೀ ಶಿವಾನಂದ ಮಹಾಸ್ವಾಮಿಗಳು
ಹುಲಸೂರು–ಬಸವಕಲ್ಯಾಣ

– ೧೧ –

ಮಗುವಿಗೆ ಹಾಲುಣಿಸುವ ತಾಯಿಯಂತೆ
ರೋಗಿಗೆ ಔಷಧೋಪಚಾರ ಮಾಡುವ ವೈದ್ಯನಂತೆ
ಕ್ಯಾನ್ಸರ ಗಡ್ಡೆಯ ಶಸ್ತ್ರ ಕ್ರಿಯೆಯಿಂದ ತೆಗೆವ ಸರ್ಜನ್‌ನಂತೆ
ಒಣಗುವ ಸಸಿಗೆ ನೀರುಣಿಸುವ ರೈತನಂತೆ
ಶಿಷ್ಯರಿಗೆ ತತ್ತ್ವ ಬೋಧಿಸುವ ಗುರುವಿನಂತೆ
ಶರಣ ಸಿದ್ಧಾಂತ ಶಿಬಿರದೊಂದಿಗೆ
ಮಹಾಂತ ಜೋಳಿಗೆ ಮೂಲಕ

ಜನಮನವ ತಿದ್ದುವ ಇಳಕಲ್ಲ ಮಹಾಂತರ
ಕಂಡೆನಯ್ಯಾ ಹಂಸಯೋಗಿ.

–ಪೂಜ್ಯ ಶಿವಾನಂದ ಗುರೂಜಿಯವರು
ಬಸವಗುರು ತಪೋವನ, ಶಿರಮಗೊಂಡನಹಳ್ಳಿ–ದಾವಣಗೆರೆ

– ೧೨ –

ಬಸವ ತತ್ತ್ವವ ದೇಶ – ವಿದೇಶಗಳಲ್ಲಿ ಪಸರಿಸಿ
ಬಾನೆತ್ತರಕ್ಕೇರಿಸಿದ ಬಸವಭಾನು
ಬದುಕಿನಿಂದ ವಂಚಿತರಾದ ದೇವದಾಸಿಯರಿಗೆ
ಮಂಗಲ ಜೀವನ ಕರುಣಿಸಿದ ಕರುಣಾಮಯಿ
ಆಹೋರಾತ್ರಿ ಹಸಿವು – ತೃಷೆಯೆನ್ನದೆ
ಮಹಾಂತ ಜೋಳಿಗೆ ಹಿಡಿದು ದೇಶ – ವಿದೇಶ ತಿರುಗಿ
ಜನರ ದುರ್ವ್ಯಸನ – ದುಶ್ಚಟ – ದುರ್ಗುಣಗಳ ಬಿಡಿಸಿ
ಮೌಲ್ಯದ ಬದುಕು ಕರುಣಿಸಿದ ಮಾನವಕುಲ ಜ್ಯೋತಿ
ಇಳಕಲ್ಲದ ಮಹಾಂತ ಶಿವಯೋಗಿ ನೋಡಾ
ವಿಪ್ರಬಾಧ ಪ್ರಿಯ ವರಗುರು ಬಸವೇಶ.

– ವೀರಶೆಟ್ಟಿ ಪ್ರಭುಶೆಟ್ಟಿ ಬಾವುಗೆ
ಭಾಲ್ಕಿ ಜಿ ॥ ಬೀದರ

– ೧೩ –

ವ್ಯಕ್ತಿಯ ಹಾಳು ಮಾಡುವ ಚಟಗಳನು
ವ್ಯಕ್ತಿತ್ವಕ್ಕೆ ಧಕ್ಕೆ ತರುವ ದುರ್ಗುಣಗಳನು
ನಿರ್ಮೂಲನೆ ಮಾಡುವ ಮಹಾಂತ ಜೋಳಿಗೆಯ
ಮಹಾಂತ ಶಿವಯೋಗಿಗಳಿಗೆ
ನಾನೂ–ನೀನೂ ಶರಣಾಗಬೇಕು ನೋಡಾ
ಬಸವಪ್ರಿಯ ಶ್ರೀ ವೀರ ಶಿವಲಿಂಗೇಶ್ವರಾ

– ಡಾ ಬಸವರಾಜ ಮೋದಿ, ಕಲುಬುರ್ಗಿ

– ೧೪ –

ಗೊಡ್ಡ ಸಂಪ್ರದಾಯ ಅಡ್ಡಪಲ್ಲಕ್ಕಿಯನು
ಕಡ್ಡಿ ಮುರಿದ್ಹಂಗ ಮುರಿದೊಗೆದು । ಜನಮನದ
ಜಡ್ಡ ಬಿಡಿಸಿದಿರಿ ಕಾಈಶ ॥

ಮಠ ಬಿಟ್ಟು ತಿರುಗಾಡಿ ಚಟಗಳನು ಬಿಡಿಸುತ್ತ
ದಿಟವಾದ ಮಹಾಂತ ಜೋಳಿಗೆಯು । ಇತಿಹಾಸ
ಪುಟದೊಳಗೆ ಪ್ರಥಮ ಕಾಈಶ ॥

– ಶ್ರೀ ಈಶ್ವರ ಕಾಪಸೆ, ಯೋಗ ಶಿಕ್ಷಕರು, ಬೆಂಗಳೂರು

– ೧೫ –

ಧರ್ಮಗುರು ಬಸವತಂದೆಯು ಆಣತಿಯಿತ್ತು
ಕಳುಹಿದಿರಿ ಮಹಾಂತ ಜೋಳಿಗೆಯನಂದು
ನಿಮ್ಮ ತತ್ವಕೆ ಸಲ್ಲುದುದ ಅದಕ್ಹಾಕಿ ಶುದ್ಧರಾಗಲೆಂದು
ಬಸವ ಕಂದಳ ಸರ್ವೇಶ ಪ್ರಭುವೆ
ಮಹಾಂತ ಜೋಳಿಗೆಯ ಮಹಿಮೆಯ ಕೇಳಿ
ಬೆರಗಾಗಿ ನಿಂದೆ ನಾನು

– ಸರೋಜಮ್ಮ ನಾಗರಾಜು, ಮೈಸೂರು

– ೧೬ –

ಮದ್ಯ ಪಾನಾದಿಗಳ ಸಂಗ ಎಂಜಲ ತಿನ್ನಿಸಿತ್ತು
ಬೀಡಿ ಸಿಗರೇಟುಗಳ ಸಂಗ ಶರೀರ ಕೆಡಿಸಿತ್ತು
ವೇಶಿಯರ ಸಂಗ ಏಡ್ಸ್ ರೋಗಕ್ಕೆ ಆಹ್ವಾನಕ್ಕಿಕ್ಕಿತ್ತು
ಇಂತೀ ತ್ರಿವಿಧ ನಾಸ್ತಿಯಾದಲ್ಲದೆ ಸುಖವಿಲ್ಲವೆಂದು
ಮಹಾಂತ ಜೋಳಿಗೆ ಹಿಡಿದು ಜಗವೆಲ್ಲ ಸಂಚರಿಸುತಿಹ
ಮಹಾಂತಪ್ಪಗಳ ಶ್ರೀ ಪಾದಂಗಳಿಗೆ
ನಮೋ ನಮೋ ಎಂಬೆನಯ್ಯಾ ರಘುಶಂಖೇಶ್ವರಾ

– ರಘುಶಂಖ ಭಾತಂಬ್ರಾ, ಬೀದರ,

– ೧೭ –

ಸಿರಿ ಸಂಪದ ಬೇಡದ ಜೋಳಿಗೆ
ದವಸ ಧಾನ್ಯವ ಬಯಸದ ಜೋಳಿಗೆ
ಆಸ್ತಿ ಪಾಸ್ತಿ ಆಶಿಸದ ಜೋಳಿಗೆ
ಪದವಿ ಪ್ರಭಾವ ಪರಿಗಣಿಸದ ಜೋಳಿಗೆ
ಬಸವಪ್ರಿಯ ವಿಜಯ ಮಹಾಂತನ ಸ್ವರೂಪದಲಿ ಬಂದ
ಚಿತ್ತರಗಿ ಪೀಠದ ಸವದಿ ಮಹಾಂತಪ್ಪ ತಂದ
ಮಹಾಂತ ಜೋಳಿಗೆಯಿದು ಕಾಣಿರೋ

–ಮಹಾಂತಪ್ರಿಯ ಬಿ. ಶೇಖರಪ್ಪ
ಹುಲಿಗೇರಿ ಸಾ. ಇಳಕಲ್ಲ

– ೧೮ –

ದುರ್ವ್ಯಸನ ದುರಾಚಾರವ ಬೇಡಿದ ಜೋಳಿಗೆ
ದುಶ್ಚಟ ದುರ್ಗುಣವ ಬೇಡಿದ ಜೋಳಿಗೆ
ಬೀಡಿ–ಸಿಗರೇಟು–ತಂಬಾಕು ಬೇಡಿದ ಜೋಳಿಗೆ
ಗುಟಕಾ–ಪಾನಪರಾಗ ಖೈನಿ ಬೇಡಿದ ಜೋಳಿಗೆ
ಜೂಜು–ಮಟಕಾ ಬೇಡಿದ ಜೋಳಿಗೆ
ರಾಗ–ದ್ವೇಷ–ಅಸೂಯೆಗಳ ಬೇಡಿದ ಜೋಳಿಗೆ
ಚಾಡಿ–ಚುಗಲಿ–ನಿಂದೆ ಬೇಡಿದ ಜೋಳಿಗೆ
ಕೊಲೆ–ಸುಲಿಗೆ–ಜಗಳ ಬೇಡಿದ ಜೋಳಿಗೆ
ಸರಾಯಿ–ಸಿಂದಿ–ಮದ್ಯಪಾನವ ಬೇಡಿದ ಜೋಳಿಗೆ
ಲಂಚ ವಂಚನೆ ಭ್ರಷ್ಟಾಚಾರವ ಬೇಡಿದ ಜೋಳಿಗೆ
ವರ್ಣಭೇದ ವರ್ಗಭೇದವ ಬೇಡಿದ ಜೋಳಿಗೆ
ಆಶ್ರಮಭೇದ ಲಿಂಗಭೇದವ ಬೇಡಿದ ಜೋಳಿಗೆ
ಜಾತಿ–ವಿಜಾತಿ ಭೇದವ ಬೇಡಿದ ಜೋಳಿಗೆ
ಸ್ಪೃಶ್ಯ–ಅಸ್ಪೃಶ್ಯತೆ ಭೇದವ ಬೇಡಿದ ಜೋಳಿಗೆ
ಅನೀತಿ–ಅನಾಚಾರವ ಬೇಡಿದ ಜೋಳಿಗೆ
ಶುಷ್ಕಾಚಾರ–ಕಂದಾಚಾರವ ಬೇಡಿದ ಜೋಳಿಗೆ
ಮೂಢನಂಬಿಕೆ ಮೂಢಾಚಾರಗಳ ಬೇಡಿದ ಜೋಳಿಗೆ
ಇದು ಮಹಾಂತಪ್ಪಗಳ ಮಾತೃಹೃದಯದ
ಮಹಾಂತ ಜೋಳಿಗೆ ನೋಡಾ
ಜಗಜ್ಯೋತಿ ಬಸವೇಶ್ವರಾ

–ಸಿದ್ಧಣ್ಣ ಲಂಗೋಟಿ (ಚಾಂದಕವಠೆ)

೧೪. ವ್ಯಸನಿಗಳಿಗೆ ವಚನಕಾರರ ಸಂದೇಶ

– ೧ –

ಸಾರ ಸಜ್ಜನರ ಸಂಗ ಲೇಸು ಕಂಡಯ್ಯ
ದೂರ ದುರ್ಜನರ ಸಂಗವದು ಭಂಗವಯ್ಯಾ
ಸಂಗವೆರಡುಂಟು : ಒಂದ ಹಿಡಿ, ಒಂದ ಬಿಡು
ಮಂಗಳಮೂರ್ತಿ ನಮ್ಮ ಕೂಡಲಸಂಗನ ಶರಣರ

– ೨ –

ಬೆಳೆಯ ಭೂಮಿಯಲೊಂದು ಪ್ರಳಯದ ಕಸಹುಟ್ಟಿ
ತಿಳಿಯಲೀಯದು ಎಚ್ಚರಲೀಯದು
ಎನ್ನ ಅವಗುಣವೆಂಬ ಕಸವ ಕಿತ್ತಿ ಸಲಹಯ್ಯಾ
ಲಿಂಗ ತಂದೆ, ಸುಳಿದೆಗೆದು ಬೆಳೆವೆನು
ಕೂಡಲಸಂಗಮದೇವಾ.

– ೩ –

ನೋಡಲಾಗದು ನುಡಿಸಲಾಗದು
ಪರಸ್ತ್ರೀಯ ಬೇಡ ಕಾಣಿರೋ
ತಗರ ಬೆನ್ನಲಿ ಹರಿವ ಸೊಣಗನಂತೆ
ಬೇಡ ಕಾಣಿರೋ !
ಒಂದಾಸೆಗೆ ಸಾವಿರ ವರುಷ ನರಕದಲ್ಲದ್ದುವ
ಕೂಡಲಸಂಗಮದೇವ.

– ೪ –

ಅಂಗದಿಚ್ಛೆಗೆ ಮದ್ಯ ಮಾಂಸವ ತಿಂಬರು
ಕಂಗಳಿಚ್ಛೆಗೆ ಪರವಧುವ ನೆರೆವರು
ಲಿಂಗ ಲಾಂಛನಧಾರಿಯಾದಲ್ಲಿ ಫಲವೇನು ?
ಲಿಂಗಪಥವ ತಪ್ಪಿ ನಡೆವರು
ಜಂಗಮ ಮುಖದಿಂದ ನಿಂದೆ ಬಂದಡೆ
ಕೊಂಡ ಮಾರಿಂಗೆ ಹೋಹುದು ತಪ್ಪದು
ಕೂಡಲಸಂಗಮದೇವಾ

– ೫ –

ಎಲವೋ ಎಲವೋ ಪಾಪಕರ್ಮವ ಮಾಡಿದವನೆ
ಎಲವೋ ಎಲವೋ ಬ್ರಹ್ಮ ಹತ್ಯವ ಮಾಡಿದವನೆ
ಒಮ್ಮೆ ಶರಣೆನ್ನೆಲವೋ
ಒಮ್ಮೆ ಶರಣೆಂದರೆ ಪಾಪ ಕರ್ಮ ಓಡುವವು
ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದವು
ಓರ್ವಂಗೆ ಶರಣೆನ್ನು ನಮ್ಮ ಕೂಡಲಸಂಗಮದೇವಂಗೆ

– ೬ –

ಹರಿವ ಹಾವಿಗಂಜೆ, ಉರಿಯ ನಾಲಿಗೆಗಂಜೆ
ಸುರಗಿಯ ಮೊನೆಗಂಜೆ
ಒಂದಕ್ಕಂಜುವೆ ಒಂದಕ್ಕಳುವೆ
ಪರಸ್ತ್ರೀ ಪರಧನವೆಂಬೀ ಜೂಬಿಂಗಂಜುವೆ
ಮುನ್ನಂಜದ ರಾವಣನೇ ವಿಧಿಯಾದ
ಅಂಜುವೆನಯ್ಯಾ ಕೂಡಲಸಂಗಮದೇವಾ

–ವಿಶ್ವಗುರು ಬಸವಣ್ಣನವರು

– ೭ –

ಲಂಚ ವಂಚನಕ್ಕೆ ಕೈಯಾನದ ಭಾಷೆ
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ
ನಾನು ಕೈ ಮುಟ್ಟಿ ಎತ್ತಿದೆನಾದಡೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ
ಅದೇನು ಕಾರಣವೆಂದಡೆ –
ನೀವಿಕ್ಕಿದ ಭಿಕ್ಷೆಯಲ್ಲಿಪ್ಪೆನಾಗಿ
ಇಂತಲ್ಲದೆ ನಾನು ಅಳಿಮನವ ಮಾಡಿ
ಪರದ್ರವ್ಯಕ್ಕೆ ಆಸೆ ಮಾಡಿದೆನಾದಡೆ
ನೀನಾಗಲೇ ಎನ್ನ ನರಕದಲದ್ದಿ
ನೀನೆದ್ದು ಹೋಗಾ ಶಂಭು ಜಕ್ಕೇಶ್ವರಾ

–ಶರಣೆ ಸತ್ಯಕ್ಕ

– ೮ –

ಗಾಳಿ ಬಿಟ್ಟಲ್ಲಿ ತೂರಿಕೊಳ್ಳಿರಯ್ಯಾ
ಗಾಳಿ ನಿಮ್ಮಾಧೀನವಲ್ಲವಯ್ಯ !
ನಾಳೆ ತೂರಿಹೆನೆಂದರೆ ಇಲ್ಲವಯ್ಯಾ
ಶಿವಶರಣ ಎಂಬುದೊಂದು ಗಾಳಿ ಬಿಟ್ಟಲ್ಲಿ
ಬೇಗನೆ ತೂರೆಂದ ಅಂಬಿಗಚೌಡಯ್ಯ

–ಶರಣ ಅಂಬಿರ ಚೌಡಯ್ಯ

– ೯ –

ಅಯ್ಯಾ ತಂಬಾಕು ಭಕ್ಷಣೆಯ ಮಾಡಿದರೆ
ಹಂದಿಯ ನರಕವ ಕೊಂಡ ಸಮಾನ,
ನಾಸೀ ಭಕ್ಷಣವ ಮಾಡಿದರೆ
ನಾಯನರಕವ ಕೊಂಡ ಸಮಾನ,
ಭಂಗಿ ಭಕ್ಷಣವ ಮಾಡಿದರೆ
ಮಾರ್ಜಾಲನ ಮಲವ ತಿಂದ ಸಮಾನ,
ಗಾಂಜಾ ಭಕ್ಷಣವ ಮಾಡಿದರೆ
ಹದಿನೆಂಟು ಜಾತಿ ನೂರೊಂದು ಕುಲದ
ಮಲವ ತಿಂದ ಸಮಾನ,
ಇದು ಕಾರಣ,
ತಂಬಾಕು, ನಾಸಿ, ಭಂಗಿ, ಗಾಂಜಾ ಭಕ್ಷಿಸಿ
ಅಂಗದ ಮೇಲೆ ಇಷ್ಟಲಿಂಗವ ಕಟ್ಟಿ
ಅನ್ಯದೈವಕ್ಕೆ ಜಗುಲಿಯ ಕಟ್ಟಿ, ಮನೆಯೊಳಗಿಟ್ಟು
ಪೂಜಿಸುವ ಭ್ರಷ್ಟರಿಗೆ
ಪರಮನಿರಂಜನ, ಶ್ರೀ ಗುರುಲಿಂಗ, ಜಂಗಮವೆಂದು
ಕರೆತಂದು, ಅವರ ಪಾದೋದಕ ಪ್ರಸಾದವ ತೆಗೆದುಕೊಂಬವರಿಗೆ
ಹದಿನೆಂಟು ಕೋಟಿ ಯುಗ ಪರಿಯಂತರ ನರಕದ ಕುಂಡದಲ್ಲಿಕ್ಕುವದು
ಕಾಣೆಂದ ರೇಕಣ್ಣ ಪ್ರಿಯ ನಾಗಿನಾಥಾ
ಬಸವಣ್ಣನಿಂದ ಬದುಕಿತ್ತೀ ಲೋಕವೆಲ್ಲ.

–ಶರಣ ಬಹುರೂಪಿ ಚೌಡಯ್ಯ

– ೧೦ –

ನಿಮ್ಮ ನಿಲವಿಂಗೆ ನೀವು ನಾಚಬೇಡವೆ ?
ಅನ್ಯರ ಕೈಯಲ್ಲಿ ಅಲ್ಲಾ ಎನಿಸಿಕೊಂಬ ನಡೆನುಡಿ ಏಕೆ ?
ಅಲ್ಲ ಎನಿಸಿಕೊಂಬುದರಿಂದ ಆ ಕ್ಷಣವೆ ಸಾವುದು ಲೇಸು
ಕಾಣಾ ಚೆನ್ನಮಲ್ಲಿಕಾರ್ಜುನಾ..

–ಶರಣೆ ಅಕ್ಕಮಹಾದೇವಿ

– ೧೧ –

ಹೊಗೆಯ ತಿಂಬುವದೊಂದು ಸುಗುಣವೆಂದೆನಬೇಡ
ಹೊಗೆಯ ಕುಡಿದು ಎಲೆಯನಗಿವವನ ಬಾಯಿ । ಸಿಂದಿಯ
ಲಗಳಿಯಂತಿಹುದು ಸರ್ವಜ್ಞ॥

– ೧೨ –

ವ್ಯಸನದಿ ದೇಹವು ಮಸಣವನು ಕಾಣುವದು
ವ್ಯಸನವನು ಬಿಟ್ಟು ಹಸನಾಗಿ । ದುಡಿದಿಹರೆ
ಅಶನ ವ್ಯಸನಗಳು ಸರ್ವಜ್ಞ॥

– ೧೩ –

ಭಂಗಿಯನು ತಿಂಬುವನ ಭಂಗವನು ನೋಡಿರಿ
ಭಂಗಿಯ ರಸವು ತಲೆಗೇರಿ । ಚಿತ್ರದಾ
ಬಿಂಗಿಯಂತಿಹನು ಸರ್ವಜ್ಞ.

– ೧೪ –

ಮದ್ದು ತಿನ್ನುವ ಪ್ರಾಣಿ ಬುದ್ಧ ನೆಂದೆನಬೇಡ
ಮದ್ದು ತಲೆಗೇರಿರುವಾಗಲೆಡಕತ್ತು । ಗುದ್ದು–
ವದನರಿಯ ಸರ್ವಜ್ಞ.

–ಸರ್ವಜ್ಞ ವಚನಗಳು

ಪೂಜ್ಯ ಡಾ. ಮಹಾಂತ ಶಿವಯೋಗಿಗಳವರಿಗೆ ಸಂದಿರುವ ಗೌರವ ಪ್ರಶಸ್ತಿಗಳು

೧.	ಅಭಿನವ ಚೆನ್ನಬಸವಣ್ಣ	– ಹುಕ್ಕೇರಿಮಠ ಹಾವೇರಿ	(೧೯೬೭)
೨.	ಕಾಯಕನಿಷ್ಠ ಶಿವಯೋಗಿ	– ಶ್ರೀ ಪುಟ್ಟರಾಜ ಗವಾಯಿಗಳು ಪುರಾಣ ಸಮಿತಿ ದಾವಣಗೆರೆ	(೧೯೬೮)
೩.	ಪ್ರವಚನ ಪ್ರವೀಣ	– ನಾಗರಿಕರು ಬಾಗಲಕೋಟೆ	(೧೯೬೯)
೪.	ಶಿವಾನುಭವ ಚರವರ್ಯ	– ಚಿತ್ತರಗಿ–ಇಳಕಲ್ಲದ ಸದ್ಭಕ್ತರು	(೧೯೭೦)
೫.	ಸಮ ಸಮಾಜ ಸಂಘಟಕ	– ರಾವೂರು ಸದ್ಭಕ್ತರು (ಚಿತ್ತಾಪೂರ)	(೧೯೭೧)
೬.	ಮಹಾಂತ ಜೋಳಿಗೆ ಶಿವಶಿಲ್ಪಿ	– ಚಿತ್ತರಗಿ ಪೀಠದ ಸದ್ಭಕ್ತರು	(೧೯೭೬)
೭.	ಲಿಂಗವಂತಧರ್ಮ ಪ್ರಚಾರ ಧುರೀಣ	– ಶ್ರೀ ಮುರುಘಾಮಠ ಧಾರವಾಡ	(೧೯೮೧)
೮.	ಸೋಲರಿಯದ ಸಾಧಕ	– ಶ್ರೀ ವಿ.ಮ.ವಿ. ಸಂಘ ಇಲಕಲ್ಲ	(೧೯೯೧)
೯.	ಅರಿವಿನ ಗುರುಮೂರ್ತಿ	– ಯುಥ್ ಫೆಡರೇಶನ್ ಅಥಣಿ	(೧೯೯೨)
೧೦.	ಸವದಿಯ ಸಿರಿ	– ಸವದಿ ಸದ್ಭಕ್ತರು	(೧೯೯೨)
೧೧.	ಕಾಯಕಯೋಗಿ	– ಶ್ರೀ ಮುರುಘಾಮಠ, ಚಿತ್ರದುರ್ಗ	(೧೯೯೫)
೧೨.	ದಲಿತೋದ್ಧಾರಕ ಮಹಾಂತ	– ಶ್ರೀ ಹಿರೇಮಠ ಸಂಸ್ಥಾನ ಭಾಲ್ಕಿ	(೧೯೯೮)
೧೩.	ಸಮಾಜ ಸುಧಾರಕ	– ಶ್ರೀ ಮುರುಘಾಮಠ, ಚಿತ್ರದುರ್ಗ	(೨೦೦೧)
೧೪.	ಹೇ ಅಮೃತ ನಿಧಿ	– ವಿಮೋಚನಾ ಸಂಸ್ಥೆ, ಅಥಣಿ	(೨೦೦೨)
೧೫.	ಸ್ಪಂದನ ಪ್ರಶಸ್ತಿ	– ಇಂಡಿಯನ್ ಸೈಕಿಯಾಟ್ರಿಕ್ ಸೊಸೈಟಿ	(೨೦೦೩)
೧೬.	ಗಣಾಚಾರ ಪ್ರಶಸ್ತಿ	– ಅಂಬಿಗ ಚೌಡಯ್ಯ ಪ್ರತಿಷ್ಠಾನ ಗದಗ–ಬೆಟಗೇರಿ	(೨೦೦೬)
೧೭.	ಕನಕಶ್ರೀ ಪ್ರಶಸ್ತಿ	– ಕನಕದಾಸ ಸಾಹಿತ್ಯ–ಸಂಸ್ಕೃತಿ ವೇದಿಕೆ, ಅಥಣಿ	(೨೦೦೬)
೧೮.	ನಾಡಿನ ಪುಣ್ಯದ ಶಿವಯೋಗಿ	– ಬಸವೇಶ್ವರ ವಿದ್ಯಾವರ್ಧಕ ಸಂಘ ಬಾಗಲಕೋಟೆ	(೨೦೦೭)
೧೯.	**ಗೌರವ ಡಾಕ್ಟರೇಟ್**	– ಕರ್ನಾಟಕ ವಿ.ವಿ. ಧಾರವಾಡ	(೨೦೦೯)
೨೦.	ಸಮಾನತೆಯ ಹರಿಕಾರ	– ನಗರ ಸಭೆ ಬೀದರ	(೨೦೦೯)
೨೧.	**ಸಂಯಮ ಪ್ರಶಸ್ತಿ**	– ಕರ್ನಾಟಕ ರಾಜ್ಯ ಸರ್ಕಾರದ ಮದ್ಯಪಾನ ಸಂಯಮ ಮಂಡಳಿ, ಬೆಂಗಳೂರು	(೨೦೧೨)
೨೨.	**ರಾಷ್ಟ್ರೀಯ ಬಸವ ಪುರಸ್ಕಾರ**	– ಕರ್ನಾಟಕ ಸರಕಾರ, ಬೆಂಗಳೂರು	(೨೦೧೨)

ಗ್ರಂಥ ಋಣ – ಆಧಾರ ಗ್ರಂಥಗಳು

೧. ಮಹಾಂತ ಜೋಳಿಗೆ ಫಲಶ್ರುತಿ – ಪ್ರೊ. ಎಚ್. ಬಿ. ಮಾಳಿ

೨. ಬಸವಜ್ಯೋತಿ ಮಹಾಂತ ಶಿವಯೋಗಿಗಳು – ಪ್ರೊ. ಸಿದ್ಧಣ್ಣ ಲಂಗೋಟಿ

೩. ಕವಿಗಳು ಕಂಡ ಮಹಾಂತ ಶಿವಯೋಗಿಗಳು – ಡಾ. ಕಲ್ಯಾಣಮ್ಮ ಲಂಗೋಟಿ

೪. ಆಧುನಿಕ ವಚನಕಾರರ ದೃಷ್ಟಿಯಲ್ಲಿ ಮಹಾಂತರು – ಸಂ. ವೀರಶೆಟ್ಟಿ ಬಾವುಗೆ

೫. ಮಹಾಂತ ಬೆಳಗು – ಬಿ. ಶೇಖರಪ್ಪ ಹುಲಿಗೇರಿ

೬. ಶರಣ ಸಾರಥಿ – ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು

೭. ಸರ್ವಜ್ಞ ವಚನಗಳು – ಶ್ರೀ ಚನ್ನಪ್ಪ ಉತ್ತಂಗಿ

೮. ಚಟಗಳು – ಡಾ. ಸ. ಜ. ನಾಗಲೋಟಿಮಠ

೯. ಮದ್ಯಪಾನದ ದುಷ್ಪರಿಣಾಮಗಳು – ಡಾ. ಸ. ಜ. ನಾಗಲೋಟಿಮಠ

೧೦. ಚಿತ್ತರಗಿ–ಇಳಕಲ್ಲ ಶ್ರೀ ವಿಜಯಮಹಾಂತೇಶ್ವರ ಸಂಸ್ಥಾನಮಠ (ಮಹಾಪ್ರಬಂಧ) – ಡಾ. ರಾಜಶೇಖರ ಬಸುಪಟ್ಟದ

11. Saga of the saffron mahanta Jolige - V. S. Charantimath

12. Gains and Rewards of Mahanta Jolige - Tr. By. K. B. Kulkarni

೧೩. ಮಹಾಂತ ಜೋಳಿಗೆ – ಶ್ರೀ ಸಂಗಮೇಶ ಹೊಸಮನಿ

೧೪. ಮಹಾಂತ ದರ್ಶನ – ಡಾ. ಎಚ್. ತಿಪ್ಪೇರುದ್ರಸ್ವಾಮಿ

೧೫. ಚಿತ್ತರಗಿ ಸಂಸ್ಥಾನಮಠ ಇಳಕಲ್ಲ – ಪ್ರೊ. ಅನಿತಾ ಗುಡಿ

೧೬. ಮಹಾಂತ ಮಂದಾರ – ಪ್ರಭು ಚೆನ್ನಬಸವ ಸ್ವಾಮಿಗಳು

೧೭. ವ್ಯಸನ ಮುಕ್ತಿ – ಶ್ರೀ ಶಾಂತಗಂಗಾಧರ ಸ್ವಾಮಿಗಳು

೧೮. ಧರೆಗಿಳಿದ ಬಸವ ಬೆಳಕು – ಸಂ. ಡಾ. ಸಂಗಮನಾಥ ಲೋಕಾಪುರ

೧೯. ಇಳಕಲ್ಲ ಮಹಾಂತ ಶಿವಯೋಗಿಳು – ಡಾ. ಹಿರೇಮಲ್ಲೂರ ಈಶ್ವರನ್

೨೦. ಯುಗ ಪುರುಷ ಮಹಾಂತ ಶಿವಯೋಗಿಗಳು – ಪ್ರೊ. ಸಿದ್ಧಣ್ಣ ಲಂಗೋಟಿ

೨೧. ಬಸವಯುಗದ ವಚನ ಮಹಾಸಂಪುಟ – ಸಂ. ಡಾ. ಎಂ. ಎಂ. ಕಲಬುರ್ಗಿ

೨೨. ವಚನ ತವನಿಧಿ – ಸಂ. ಪ್ರಕಾಶ. ಗು. ಕಶೆಟ್ಟಿ

೨೩. ಬಸವ ಬೆಳಗು–ತ್ರೈಮಾಸಿಕ – ಸಂ. ಪ್ರೊ. ಸಿದ್ಧಣ್ಣ ಲಂಗೋಟಿ

೨೪. ಕರಣ ಹಸಿಗೆ – ಸಂ. ಡಾ. ಇಮ್ಮಡಿ ಶಿವಬಸವ ಸ್ವಾಮಿಗಳು

೨೫. ಬಸವ ಭೂಮಿಯಿಂದ ಆಂಗ್ಲನಾಡಿಗೆ (ಬಸವ ಬೆಳಗು ಪತ್ರಿಕೆಯಲ್ಲಿಯ ಲೇಖನಗಳು) – ಪ್ರೊ. ಸಿದ್ಧಣ್ಣ ಲಂಗೋಟಿ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಪ್ರತಿ ವರ್ಷ ಅಗಸ್ಟ – ೧ರಂದು ಡಾ. ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆಯನ್ನು ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ವ್ಯಸನಮುಕ್ತ ದಿನಾಚರಣೆಯನ್ನಾಗಿ ಆಚರಿಸುವ ಬಗ್ಗೆ.

ಓದಗಲಾಗಿದೆ : ೧. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂ. ಆಇ ೪೧ ವೆಚ್ಚ ೭/೨೦೨೨ ದಿನಾಂಕ : ೦೫/೦೪/೨೦೨೨

೨. ಸರ್ಕಾರದ ಅದೇಶ ಸಂಖ್ಯೆ : ಎಫ್‌ಡಿ ೦೧ ಟಿಎಫ್‌ಪಿ ೨೦೨೨ ದಿನಾಂಕ : ೦೪/೦೪/೨೦೨೨

೩. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಇವರ ಏಕಕಡತ ಸಂ. : ಕೆಎಸ್‌ಟಿಬಿ/ಇಎಸ್‌ಟಿ೧/ಪಾ.ನ./೨೦೨೨-೨೩, ದಿನಾಂಕ : ೦೫/೦೫/೨೦೨೨

ಪ್ರಸ್ತಾವನೆ :

ಮೇಲೆ ಕ್ರಮ ಸಂ. (೧) ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲಿ ೨೦೨೨-೨೩ನೆಯ ಸಾಲಿನ ಆಯವ್ಯಯದಲಿ ವಾರ್ತಾ ಇಲಾಖೆಗೆ ಸಂಬಂಧಿಸಿದ ಅನುದಾನದ ವಿನಿಯೋಗ ಯೋಜನೆ/ಕಾರ್ಯಕ್ರಮಗಳ ಅನುಷ್ಠಾನಕ್ಕೆ, ವಿಶೇಷ ಸೂಚನೆಗಳನ್ನು ನಿಡಿದ್ದು ಆಡಳಿತ ಇಲಾಖೆಗಳು ಸದರಿ ಸೂಚನೆಗಳ ಅನುಷ್ಠಾನಕ್ಕೆ ಅಗತ್ಯ ಕ್ರಮವಹಿಸುವಂತೆ ಸೂಚಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (೨) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ೨೦೨೨-೨೩ನೆಯ ಸಾಲಿನಲ್ಲಿ ಮೊದಲನೆಯ ಮತ್ತು ಎರಡನೆಯ ಕಂತಿನ ಅನುದಾನ ಬಿಡುಗಡೆ ಮಾಡಲು ಮತ್ತು ವೇತನ, ಭತ್ಯೆಗಳು ಹಾಗೂ ಕಛೇರಿ ನಿರ್ವಹಣೆ ಬಾಬ್ತುಗಳಿಗೆ ಆಯವ್ಯಯದ ಅವಕಾಶದವರೆಗೆ ಆರ್ಥಿಕ ಇಲಾಖೆಯ ಅನುಮತಿ ಇದೆಯೆಂದು ಭಾವಿಸಿ ಹಣ ಬಿಡುಗಡೆ ಮಾಡಲು ಸಂಬಂಧಿಸಿದ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಆರ್ಥಿಕ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.

ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಮಠ, ಇಳಕಲ್ಲದ, ಪೂಜ್ಯ ಲಿಂಗೈಕ್ಯ ಶ್ರೀ ಶ್ರೀ ಮ. ನಿ. ಪ್ರ. ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆಯನ್ನು ಸರ್ಕಾರಿ ಕಾರ್ಯಕ್ರಮವಾಗಿ ಪ್ರತಿವರ್ಷ ಅಗಸ್ಟ್ ೦೧ ರಂದು ವ್ಯಸನ ಮುಕ್ತ ದಿನಾಚರಣೆಯನ್ನಾಗಿ ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಆಚರಿಸುವ ಬಗ್ಗೆ ಆದೇಶ ನೀಡುವಂತೆ ಹಾಗೂ ಶ್ರೀ ಮ. ನಿ. ಪ್ರ. ಡಾ. ಮಹಾಂತ ಸ್ವಾಮಿಗಳ ಭಾವಚಿತ್ರ ಅನಾವರಣ ಮಾಡಿ, ಗೌರವ ವಂದನೆ ಅರ್ಪಿಸಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್

ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಜಿಲ್ಲೆಯ ವಿವಿಧ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ಮದ್ಯಪಾನ ಮಾದಕದ್ರವ್ಯ ತಂಬಾಕುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಜನಜಾಗೃತಿ ಜಾಥಾ ಹಾಗೂ ಸಮಾರಂಭ ಆಯೋಜಿಸಿ ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ತಜ್ಞರಿಂದ ಭಾಷಣ ಏರ್ಪಡಿಸಿ ಪ್ರತಿಜ್ಞಾ ವಿಧಿ ಕೈಗೊಳ್ಳುವ ಮೂಲಕ ಸಮಾರಂಭ ಆಯೋಜಿಸಲು ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಲಗತ್ತಿಸಿರುವ ಮಾರ್ಗಸೂಚಿ ಅನುಸರಿಸಿ ಕಾರ್ಯಕ್ರಮ ಆಯೋಜಿಸಲು ಮತ್ತು ಈ ಬಗ್ಗೆ ಸರ್ಕಾರದ ಆದೇಶ ಹೊರಡಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (೩) ರಲ್ಲಿ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಇವರು ಸರ್ಕಾರವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಅದೇಶ ಸಂಖ್ಯೆ : ಕೆಸಿಐ - ಪಿಐಪಿ/೧೨೧/೨೦೨೨ ಬೆಂಗಳೂರು,

ದಿನಾಂಕ : ೨೩/೦೫/೨೦೨೨

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಮ. ನಿ. ಪ್ರ. ಡಾ. ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆಯನ್ನು ಪ್ರತಿ ವರ್ಷ ಅಗಸ್ಟ ೧ ರಂದು ವ್ಯಸನ ಮುಕ್ತ ದಿನಾಚರಣೆಯನ್ನಾಗಿ ಅನುಬಂಧ-೧ರಲ್ಲಿ ಲಗತ್ತಿಸಿರುವ ಕಾರ್ಯಕ್ರಮಗಳನ್ನೊಳಗೊಂಡು ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಆಚರಿಸುವಂತೆ ಹಾಗೂ ಆಯೋಜಿಸುವ ಸಮಾರಂಭದಲ್ಲಿ ಅನುಬಂಧ-೨ ರಲ್ಲಿ ಲಗತ್ತಿಸಿರುವ ಪ್ರತಿಜ್ಞಾ ವಿಧಿ ಬೋಧಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚಿಸಿದೆ ಮತ್ತು ಸದರಿ ಸಮಾರಂಭವನ್ನು ಆಯೋಜಿಸಲು ತಗುಲುವ ವೆಚ್ಚವನ್ನು ಅನುಬಂಧ-೩ ರಲ್ಲಿ ಲಗತ್ತಿಸಿರುವಂತೆ ವಿತರಿಸಲು ಸರ್ಕಾರವು ಅನುಮತಿ ನೀಡಿ ಆದೇಶಿಸಿದೆ.

ಸದರಿ ವೆಚ್ಚವನ್ನು ೨೦೨೨-೨೩ನೆಯ ಸಾಲಿನ ಲೆಕ್ಕ ಶೀರ್ಷಿಕೆ ೨೨೨೦-೬೦-೧೦೧-೦-೦೪ ಕರ್ನಾಟಕ ರಾಜ್ಯ ಆತ್ಮ ಸಂಯಮ ಬೋರ್ಡ ೧೦೩-ಸಹಾಯಾನುದಾನ- ಸಾಮಾನ್ಯ ಅಡಿಯಲ್ಲಿ ಒದಗಿಸಿರುವ ರೂ.೫೦.೦೦ ಲಕ್ಷಗಳ ಅನುದಾನದಿಂದ ಭರಿಸತಕ್ಕದ್ದು.

ಈ ಅದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ : ಅಇ ೪೬೦ ವೆಚ್ಚ-೭/೨೦೨೧ ದಿನಾಂಕ : ೧೪/೭/೨೦೨೧ರಲ್ಲಿ ನೀಡಿರುವ ಸಹಮತಿ ಮತ್ತು ಸರ್ಕಾರ ಆದೇಶ ಸಂ.: ಅಇ ೦೧ ಟಿಎಫ್‌ಪಿ ೨೦೨೨, ದಿನಾಂಕ: ೦೪/೦೪/

೨೦೨೨ ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸಹಿ/-

(ಎಂ. ಜೆಸಿಂತ)

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ, (ವಾರ್ತಾ ಶಾಖೆ)

ಗೆ :

೧. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ)/(ಎ&ಇ), ಬೆಂಗಳೂರು.
೨. ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು.
೩. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
೪. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
೫. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
೬. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಬೆಂಗಳೂರು.
೭. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
೮. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ (೫&೭), ವಿಧಾನ ಸೌಧ, ಬೆಂಗಳೂರು.
೯. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಅನುಬಂಧ - ೧

ಆಯೋಜಿಸಬೇಕಾದ ಕಾರ್ಯಕ್ರಮಗಳ ಪಟ್ಟಿ

೧. ಶ್ರೀ ಮ. ನಿ. ಪ್ರ. ಡಾ. ಮಹಾಂತಸ್ವಾಮಿಗಳ ಭಾವಚಿತ್ರ ಅನಾವರಣ ಮಾಡಿ, ಗೌರವ ವಂದನೆ ಅರ್ಪಿಸುವುದು.

೨. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಮದ್ಯಪಾನ, ಮಾದಕದ್ರವ್ಯ ತಂಬಾಕುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ

ಅರಿವು ಮೂಡಿಸುವ ಸಲುವಾಗಿ ಜನ ಜಾಗೃತಿ ಜಾಥಾ ಹಾಗೂ ಸಮಾರಂಭ ಆಯೋಜಿಸಿ ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ತಜ್ಞರಿಂದ ಭಾಷಣ ಏರ್ಪಡಿಸುವುದು.

೩. ಮದ್ಯಪಾನದಿಂದ ಉಂಟಾಗುವ ದುಷ್ಪರಿಣಾಮಗಳ ವಿವಿಧ ಗಣ್ಯರ ಹೇಳಿಕೆ, ಅಂಕಿಅಂಶಗಳನ್ನೊಳಗೊಂಡ ಮಾಹಿತಿ ಪತ್ರವನ್ನು ಮುದ್ರಿಸಿ ಜನರಿಗೆ ವಿಶೇಷವಾಗಿ ಯುವಜನರಿಗೆ ಹಂಚುವುದು.

೪. ಪ್ರತಿ ತಾಲೂಕಿನಲ್ಲಿ ಎಲ್ಲಾ ಕಾಲೇಜುಗಳಿಂದ ವಿದ್ಯಾರ್ಥಿಗಳನ್ನು ಆಹ್ವಾನಿಸಿ ಪ್ರಭಾತ್ ಪರೇಡನ್ನು ನಡೆಸುವುದು ಅದಕ್ಕೆ ಸಂಬಂಧಪಟ್ಟ ಭಿತ್ತಿಪತ್ರ ಹಂಚಿ ಫ್ಲೆಕ್ಸ್‌ಗಳನ್ನು ಹಾಕುವುದು.

೫. ಶಾಲಾ ಕಾಲೇಜು ಮಕ್ಕಳಿಗೆ ಪ್ರಬಂಧ ಸ್ಪರ್ಧೆ, ಚರ್ಚಾ ಸ್ಪರ್ಧೆ ಏರ್ಪಡಿಸಿ ಬಹುಮಾನ ವಿತರಿಸುವುದು.

೬. ಸ್ಥಳೀಯ ಪತ್ರಿಕೆಗಳಲ್ಲಿ ಲೇಖನ ಹಾಕಿಸುವುದು.

೭. ದುಷ್ಪರಿಣಾಮಗಳ ಬಗ್ಗೆ ಪೋಟೋ ಅಲ್ಬಂ ಏರ್ಪಡಿಸುವುದು.

೮. ಸಮಾರಂಭದಲ್ಲಿ ಪ್ರತಿಜ್ಞಾ ವಿಧಿ ಬೋಧಿಸುವುದು.

೯. ಮಂಡಳಿಯಿಂದ ಮುದ್ರಿಸಲಾಗಿರುವ ಡಾ. ಮಹಾಂತಸ್ವಾಮಿಗಳ ಜೀವನಚರಿತ್ರೆ ಹಾಗೂ ಸಾಧನೆಗಳ ಕುರಿತ ಕಿರುಪುಸ್ತಕ ಹಾಗೂ ಮಡಿಕೆಪತ್ರಗಳನ್ನು ಮಂಡಳಿ ವತಿಯಿಂದ ವಿತರಿಸುವುದು.

ಅನುಬಂಧ – ೨

ಮದ್ಯಪಾನ, ಮಾದಕ ವಸ್ತು, ತಂಬಾಕು ವಸ್ತುಗಳ ವ್ಯಸನ ಮುಕ್ತಗೊಳಿಸುವ ಪ್ರತಿಜ್ಞಾ ವಿಧಿ

"ಮದ್ಯಪಾನ, ಮಾದಕವಸ್ತು, ತಂಬಾಕು ವಸ್ತುಗಳ ಸೇವನೆಯು ನನಗೆ ಮತ್ತು ಮಾನವ ಸಮಾಜಕ್ಕೆ ಮಾರಕವೆಂದು ಇದರಿಂದ ಮಾನವನ ದೇಹವಲ್ಲದೇ ಮನಸ್ಸು ಮತ್ತು ಸ್ವಾಸ್ಥ್ಯ ಸಮಾಜ ಅನಾರೋಗ್ಯ ಪೀಡಿತವಾಗುತ್ತಿರುವುದು ಮತ್ತು ಗ್ರಾಮೀಣ ಹಾಗೂ ನಗರ ಪ್ರದೇಶದ ಯುವಜನತೆ ಇದರ ದಾಸ್ಯಕ್ಕೆ ಒಳಗಾಗುತ್ತಿರುವುದು ತಿಳಿದಿದೆ. ಇದರಿಂದ ಮಾನವನ ಆರ್ಥಿಕ, ಸಾಮಾಜಿಕ ಸ್ಥಿತಿ ಅಧೋಗತಿಗೆ ಇಳಿಯುತ್ತಿದೆ ಆದ್ದರಿಂದ ಪೂಜ್ಯ ಶ್ರೀ ಮ. ನಿ. ಪ್ರ. ಡಾ. ಮಹಾಂತ ಶಿವಯೋಗಿ ಸ್ವಾಮೀಜಿಗಳ ಜನ್ಮದಿನದ ಈ ಶುಭದಿನದಂದು ನಾನು ಮದ್ಯಪಾನ, ಮಾದಕ ವಸ್ತು, ತಂಬಾಕು ವಸ್ತುಗಳನ್ನು ತ್ಯಜಿಸುತ್ತೇನೆ ಹಾಗೂ ಇನ್ನೆಂದಿಗೂ ಮುಟ್ಟುವುದಿಲ್ಲ ಎಂದು ಪ್ರತಿಜ್ಞೆ ಕೈಗೊಳ್ಳುತ್ತೇನೆ."

ಪ್ರೊ. ಸಿದ್ಧಣ್ಣ ಲಂಗೋಟಿ ಅವರ ಕೃತಿಗಳು

೧.	ಅಲ್ಲಮಪ್ರಭುದೇವರ ಜೀವನ ಸಂದೇಶ	೧೯೭೯
೨.	ಅಕ್ಕಮಹಾದೇವಿಯ ಜೀವನ ದರ್ಶನ	೧೯೭೯
೩.	ಲಿಂಗಾಯತ ಧರ್ಮ ಸಮಾಜ ತತ್ವಜ್ಞಾನ	೧೯೭೯
೪.	ಲಿಂಗಾಯತ ಧರ್ಮದ ಮೂಲತತ್ವಗಳು	೧೯೭೯
೫.	ಶಿವಯೋಗಿಣಿ ಅಕ್ಕನಾಗಮ್ಮ (ಸಂಪಾದಿತ)	೧೯೭೯
೬.	ಗಣನಾಯಕ ಮಡಿವಾಳ ಮಾಚಿದೇವರು	೧೯೭೯
೭.	ಮರಣವೇ ಮಹಾನವಮಿ	೧೯೮೦
೮.	ಷಟಸ್ಥಲ ಚಕ್ರವರ್ತಿ ಚೆನ್ನಬಸವಣ್ಣನವರು	೧೯೮೦
೯.	ಬಸವಬೆಳಗು (ಸಂಪಾದಿತ)	೧೯೮೦
೧೦.	ಪ್ರಭುವಿನ ವಾಣಿಯಲ್ಲಿ ಬಸವಣ್ಣನವರು	೧೯೮೦
೧೧.	ಲಿಂಗವಂತ ಧರ್ಮ ಪರಿಚಯ (ಸಂಪಾದಿತ)	೧೯೮೧
೧೨.	ವಚನ ಸಂಶೋಧನ ಪಿತಾಮಹ ಫ.ಗು. ಹಳಕಟ್ಟಿಯವರು	೧೯೮೧
೧೩.	ಬಸವಣ್ಣನವರ ಬಯ್ಗುಳಗಳು	೧೯೮೧
೧೪.	ಅಕ್ಕ ಕಂಡ ಅಣ್ಣ	೧೯೮೧
೧೫.	ಅಂಬಿಗರ ಚೌಡಯ್ಯ	೧೯೮೧
೧೬.	ಶರಣರ ಶಿವರಾತ್ರಿ	೧೯೮೨
೧೭.	ಸ್ವಾಮಿ ವಿವೇಕಾನಂದರ ದೇಶಭಕ್ತಿ ಕಲ್ಪನೆ	೧೯೮೨
೧೮.	ಬಸವಾದಿ ಶರಣರ ವಚನಾಮೃತ (ಸಂಪಾದಿತ)	೧೯೮೩
೧೯.	ವಿಭೂತಿ ನಿರ್ಮಾಣ ವಿಧಾನ	೧೯೮೪
೨೦.	ಬಾಚಿಕಾಯಕದ ಬಸವಪ್ಪ ಕಾಳವ್ವೆ	೧೯೮೪
೨೧.	ಶರಣರು ಹಾಗೂ ಮೂಢನಂಬಿಕೆಗಳು	೧೯೮೪
೨೨.	ಇಷ್ಟಲಿಂಗ ನಿರ್ಮಾಣ ವಿಧಾನ	೧೯೮೫
೨೩.	ಹಡಪದ ಅಪ್ಪಣ್ಣ ಲಿಂಗಮ್ಮ	೧೯೮೫
೨೪.	ಶ್ರೀ ಗುರುಸಿದ್ಧ ಪ್ರಭುದೇವರು	೧೯೮೫
೨೫.	ಇಷ್ಟಲಿಂಗ ಪೂಜಾ ವಿಧಾನ	೧೯೮೫
೨೬.	ಫಕ್ಕೀರಪ್ಪ ಮುರಗೋಡ ಮಾಸ್ತರು	೧೯೮೫
೨೭.	ಶಿವಶರಣರ ಕ್ರಾಂತಿ (ಕ.ವಿ.ವಿ. ಪ್ರಕಟಣೆ)	೧೯೮೬
೨೮.	ವಿಶ್ವಗುರು ಬಸವಣ್ಣನವರ ವಚನಗಳು (ಸಂಪಾದಿತ)	೧೯೮೬
೨೯.	ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪನವರು	೧೯೮೬
೩೦.	ಯುಗ ಪುರುಷ ಚೆನ್ನಬಸವ ಪಟ್ಟಾಧ್ಯಕ್ಷರು	೧೯೮೭
೩೧.	ಬಸವದರ್ಶನ (ಸಂಪಾದಿತ)	೧೯೮೭
೩೨.	ವಚನಸಾಹಿತ್ಯ : ತಾತ್ವಿಕ ವಿವೇಚನೆ	೧೯೮೭
೩೩.	ವಿಶ್ವವಿಖ್ಯಾತ ತತ್ವಜ್ಞಾನಿ ಡಾ. ರಾಧಾಕೃಷ್ಣನ್‌ರು	೧೯೮೮
೩೪.	ಧರ್ಮಗುರು ಜಗಜ್ಯೋತಿ ಬಸವಣ್ಣನವರು	೧೯೮೮
೩೫.	ಅಲ್ಲಮ ಪ್ರಭುದೇವರ ವಚನಗಳು (ಸಂಪಾದಿತ)	೧೯೮೯
೩೬.	ಬಸವಣ್ಣನವರು ಮತ್ತು ಜಾಗತಿಕ ಶಾಂತಿ	೧೯೮೯
೩೭.	ಬಸವಭಕ್ತ ಘನಮಠ ಶಿವಯೋಗಿಗಳು	೧೯೮೯
೩೮.	ಚೆನ್ನಬಸವಣ್ಣನವರ ವಚನಗಳು (ಸಂಪಾದಿತ)	೧೯೮೯
೩೯.	ಬಸವಭಕ್ತ ಅಥಣಿ ಶಿವಯೋಗಿಗಳು	೧೯೮೯
೪೦.	ದೇವದಾಸಿ ಪದ್ಧತಿ ವಿಮೋಚನೆ ಹಾಗೂ ಬಸವಣ್ಣನವರು	೧೯೮೯
೪೧.	ಸಿದ್ಧರಾಮೇಶ್ವರ ವಚನಗಳು (ಸಂಪಾದಿತ)	೧೯೯೦
೪೨.	ಡಾ. ಜಚನಿ ಅಂದು-ಇಂದು : ಒಂದು ವಿಮರ್ಶೆ	೧೯೯೦
೪೩.	ಶ್ರೀ ಗುರುಬಸವ ಮಂಟಪ ನಡೆದು ಬಂದ ದಾರಿ	೧೯೯೧

೪೪. ಮುರಗೋಡ ಮಹಾಂತಜ್ಜನವರು ೧೯೯೨
೪೫. ಬಸವಕಲ್ಯಾಣ ದರ್ಶನ ೧೯೯೪
೪೬. ಮಹಾಚೈತ್ರ (ವಿಮರ್ಶೆ) ೧೯೯೪
೪೭. ಬಸವಾದಿ ಶರಣರ ವಚನಜ್ಯೋತಿ (ಸಂಪಾದಿತ) ೧೯೯೬
೪೮. ಬಸವ ವಚನ ದೀಪ್ತಿ : ಒಂದು ವಿಮರ್ಶೆ ೧೯೯೬
೪೯. ಕುಮಾರ ಕಕ್ಕಯ್ಯನ ವಚನಗಳು (ಸಂಪಾದಿತ) ೧೯೯೭
೫೦. ಕುಮಾರ ಕಕ್ಕಯ್ಯ ಪೋಳ ೧೯೯೮
೫೧. ಬೀಳೂರು ಗುರುಬಸವ ಮಹಾಸ್ವಾಮಿಗಳು ೧೯೯೮
೫೨. ಜೇಡರ ದಾಸಿಮಯ್ಯ ದುಗ್ಗಳೆಯರ ವಚನಗಳು (ಸಂ) ೧೯೯೮
೫೩. ಬಸವಾದಿ ಶರಣರ ಶಿವಯೋಗದ ವಚನಗಳು (ಸಂ) ೧೯೯೯
೫೪. ಜಗಜ್ಯೋತಿ ಬಸವೇಶ್ವರ ಅಂಕಿತದ ಸಿಲಂ ವಚನಗಳು ೨೦೦೦
೫೫. ಬಂಥನಾಳ ಸಂಗನಬಸವ ಶಿವಯೋಗಿಗಳು ೨೦೦೦
೫೬. ಬಸವಗುರು ದರ್ಶನ ವಚನಗಳು (ಸಂಪಾದಿತ) ೨೦೦೧
೫೭. ಕಲ್ಯಾಣ ನಾಡಿನ ಶರಣಪರಿಷತ್ತು ನಡೆದು ಬಂದ ದಾರಿ ೨೦೦೧
೫೮. ಶರಣ ಕುಮಾರ ಕಕ್ಕಯ್ಯ ೨೦೦೧
೫೯. ಬಸವ ಬೆಳೆ ೨೦೦೨
೬೦. ಶಿವಯೋಗಿ ವೇಮನರ ವಚನಗಳು (ಸಂ.) ೨೦೦೩
೬೧. ಕನ್ನಡ ಕವಿಕಾವ್ಯ ಪರಂಪರೆ (ಸಂ.) ೨೦೦೪
೬೨. ದರ್ಪಣ – ಸ್ಮರಣ ಸಂಪುಟ (ಸಂ.) ೨೦೦೪
೬೩. ಲಿಂಗಾಯತ ಧರ್ಮ ದರ್ಶನ ೨೦೦೫
೬೪. ಕಾಯಕ ಸಂಜೀವನಿ (ಸಂ.) ೨೦೦೬
೬೫. ಬಸವಣ್ಣನವರು ೨೦೦೭
೬೬. ನೆನಹು–ಡಾ. ಕರ್ಕಿ ಹಾಗೂ ಸಣಕಲ್ಲರ ಸ್ಮರಣ ಗ್ರಂಥ (ಸಂ.) ೨೦೦೭
೬೭. ಡಾ. ಡಿ. ಎಸ್. ಕರ್ಕಿ ಜೀವನ ಸಾಧನೆ ೨೦೦೮
೬೮. ಬಸವ ಜ್ಯೋತಿ ಮಹಾಂತ ಶಿವಯೋಗಿಗಳು ೨೦೧೧
೬೯. ವಿಜಯ ಮಹಾಂತ ಶಿವಯೋಗಿಗಳು ೨೦೧೨
೭೦. ಶಿವ–ಸುಮ (ಸಂಪಾದಿತ) ೨೦೧೨
೭೧. ವಚನ ಶ್ರಾವಣ ೨೦೧೩
೭೨. ಬಸವಾನುಭಾವಿ (ಸಂಪಾದಿತ) ೨೦೧೩
೭೩. ಬಸವಾದಿ ಶಿವಶರಣರ ವಚನಗಳು (ಸಂ.) ೨೦೧೪
೭೪. ಬಸವಯೋಗಿ ಗುರುಮಹಾಂತ ಸ್ವಾಮಿಗಳು ೨೦೧೫
೭೫. ಮಹಾಂತ ಜೋಳಿಗೆ ಶಿಲ್ಪಿ ಮಹಾಂತ ಶಿವಯೋಗಿಗಳು ೨೦೧೫
೭೬. ಡಾ. ಎಂ. ಎಂ. ಕಲಬುರ್ಗಿಯವರು ೨೦೧೫
೭೭. ವಚನ ಸಂಗಮ (ಸಂಪಾದಿತ) ೨೦೧೬
೭೮. ಅಮೃತ ಬೆಳಸು (ಸಂಪಾದಿತ) ೨೦೧೬
೭೯. ಬಸವತತ್ವದ ಮಹಾದಂಡನಾಯಕ ೨೦೧೬
೮೦. ಧರ್ಮಪಿತ ವಿಶ್ವಗುರು ಬಸವಣ್ಣನವರು ೨೦೧೬
೮೧. ಶಿವಾನಂದ ಗುರೂಜಿಯವರು ೨೦೧೭
೮೨. ಬಸವಾದಿ ಶರಣರ ವಚನಗಳಲ್ಲಿ ಲಿಂಗಾಯತ–ಲಿಂಗವಂತ (ಸಂ.) ೨೦೧೭
೮೩. ವಿ. ಸಿದ್ಧರಾಮಣ್ಣ ಶರಣರು ೨೦೧೮
೮೪. ಸುಜ್ಞಾನ ಸಂಪತ್ತು (ಸಂ) ೨೦೧೮
೮೫. ಯುಗಪುರುಷ ಮಹಾಂತ ಶಿವಯೋಗಿಗಳು ೨೦೧೮
೮೬. ವೀರ ವಿರಾಗಿಣಿ ಶರಣೆ ಅಕ್ಕಮಹಾದೇವಿಯವರು ೨೦೧೮
೮೭. ಕ್ರಾಂತಿ ಗಂಗೋತ್ರಿ ಶರಣೆ ಅಕ್ಕನಾಗಮ್ಮನವರು ೨೦೧೯
೮೮. ವಚನ ಸಾಹಿತ್ಯ ಮತ್ತು ತತ್ತ್ವಜ್ಞಾನ ೨೦೨೨
೮೯. ಮಹಾಂತ ಜೋಳಿಗೆ – ವ್ಯಸನಮುಕ್ತ ಆಂದೋಲನ ೨೦೨೨

ಪ್ರೊ. ಸಿದ್ಧಣ್ಣ ಲಂಗೋಟಿ ಅವರು ಬಸವಭೂಮಿಯಾದ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಚಾಂದಕವಠೆ ಗ್ರಾಮದ ಲಿಂಗಾಯತ ಕೃಷಿ ಕುಟುಂಬದಲ್ಲಿ ಜನಿಸಿ (೧೯೫೦). ಚಾಂದಕವಠೆ, ಕನ್ನೊಳ್ಳಿ ಗ್ರಾಮಗಳಲ್ಲಿ ಪ್ರಾಥಮಿಕ ಶಿಕ್ಷಣ, ಸಿಂದಗಿಯ ಹೆಚ್.ಜಿ. ಹೈಸ್ಕೂಲದಲ್ಲಿ ಮಾಧ್ಯಮಿಕ ಶಿಕ್ಷಣ, ವಿಜಯಪುರ ಬಿ.ಎಲ್.ಡಿ.ಇ. ಸಂಸ್ಥೆಯಲ್ಲಿ ಬಿ.ಎಸ್‌ಸಿ. ಪದವಿ ಶಿಕ್ಷಣ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ತತ್ತ್ವಜ್ಞಾನ, ಎಂ.ಎ. ಹಿಂದಿ, ಎಂ.ಎ. ಕನ್ನಡ, ಎಲ್‌ಎಲ್.ಬಿ. ಕಾನೂನು ಶಿಕ್ಷಣ, ಸಿ ವಾಯ್, ಇಡಿ ಯೋಗ ಶಿಕ್ಷಣ ಪಡೆದವರಾಗಿದ್ದಾರೆ.

ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದು, ಸಾಹಿತ್ಯಕೃಷಿ ಕೈಕೊಂಡಿದ್ದಾರೆ. ಭಾರತೀಯ ಹಾಗೂ ಪಾಶ್ಚಿಮಾತ್ಯ ತತ್ತ್ವಜ್ಞಾನ, ಚಿಂತಕರೂ, ಬಸವತತ್ತ್ವಜ್ಞಾನದ ಅನುಭಾವಿ ಲೇಖಕರೂ ಆಗಿರುವ ಸಿದ್ಧಣ್ಣ ಲಂಗೋಟಿಯವರು ೮೮ ಕ್ಕೂ ಮಿಕ್ಕಿ ಗ್ರಂಥಗಳ ರಚನೆ ಹಾಗೂ ಸಂಪಾದನೆ ಮಾಡಿದ್ದಾರೆ.

ಕ್ರಿ.ಶ. ೧೯೯೦ ರಲ್ಲಿ ಹಾಗೂ ಕ್ರಿ.ಶ. ೨೦೦೦ ಇಸ್ವಿಯಲ್ಲಿ ಪಾಶ್ಚಿಮಾತ್ಯ ಹಾಗೂ ಪ್ರಪಂಚದ ಪ್ರಮುಖ ದೇಶಗಳಾದ ಇಂಗ್ಲೆಂಡ, ಅಮೇರಿಕಾ, ಫ್ರಾನ್ಸ್, ಇಟಲಿ, ಜರ್ಮನಿ, ಕೆನಡಾ, ಆಸ್ಟ್ರಿಯಾ, ಹಾಲಂಡ, ಸಿಂಗಾಪುರ, ಅರಬ ರಾಷ್ಟ್ರಗಳ ಪ್ರವಾಸ ಕೈಕೊಂಡು ಬಸವತತ್ವಜ್ಞಾನ ಕುರಿತು ಉಪನ್ಯಾಸ ನೀಡಿ, ಬಸವ ತತ್ತ್ವ ಪ್ರಸಾರಗೈದು ಬಂದಿದ್ದಾರೆ.

೧೯೭೭ ರಲ್ಲಿ ಬಸವತತ್ವ ಪ್ರಸಾರ ಸಂಸ್ಥೆ ಸ್ಥಾಪಿಸಿ ಶರಣ ಫ.ಗು. ಹಳಕಟ್ಟಿಯವರ ಶಿವಾನುಭವ ಪತ್ರಿಕೆಗೆ ಮರುಜನ್ಮ ನೀಡಿದ್ದಾರೆ. ೧೯೮೬ ರಲ್ಲಿ ಹರ್ಡೇಕರ ಮಂಜಪ್ಪನವರ ಶತಮಾನೋತ್ಸವ ಆಚರಿಸಿ 'ಶರಣಸಂದೇಶ'ವನ್ನು 'ಬಸವಬೆಳಗು' ಹೆಸರಿನಲ್ಲಿ ಮರುಹುಟ್ಟಿಗೆ ಕಾರಣೀಕರ್ತರಾಗಿದ್ದಾರೆ. ೧೯೯೦ ರಲ್ಲಿ ಇಂಗ್ಲೆಂಡಿನಲ್ಲಿ 'ಬಸವ ಇಂಟರನ್ಯಾಶನಲ್ ಫೌಂಡೇಶನ್' ಪ್ರಾರಂಭಿಸಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಚಿತ್ತರಗಿಯಲ್ಲಿ ೧೯೯೬ರಲ್ಲಿ ಬಸವಕೇಂದ್ರ ಸ್ಥಾಪಿಸಿದ್ದಾರೆ. ಇಳಕಲ್ಲ ಶರಣ ಸಿದ್ಧಾಂತ ವಿದ್ಯಾಪೀಠದ ಸಂಚಾಲಕರಾಗಿ ೪೫ ವರುಷಗಳಿಂದ ಶಿವಾನುಭವ ಶಿಬಿರಗಳನ್ನು ಸಂಘಟಿಸಿದ್ದಾರೆ. 'ಜಗಜ್ಯೋತಿ ಬಸವೇಶ್ವರ' ವಚನಾಂಕಿತದಲ್ಲಿ ಸಾವಿರಾರು ವಚನಗಳನ್ನು ಬರೆದು ಆಧುನಿಕ ವಚನಕಾರರಲ್ಲಿ ಒಬ್ಬರಾಗಿದ್ದಾರೆ.

ಗದಗ–ಬೆಟಗೇರಿ

–ಅಂಬಿಗರ ಕುಮಾರಚೌಡಯ್ಯ
ಆಧುನಿಕ ವಚನಕಾರರು